ಸಂಪುಟ 01 । ಸಂಚಿಕೆ 54 । ಭಾನುವಾರ 04 ಜನವರಿ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ಬ್ರೈಲ್ ದಿನ**

ವಿಶ್ವ ಬ್ರೈಲ್ ದಿನವನ್ನು ಪ್ರತಿ ವರ್ಷ ಜನವರಿ 4ರಂದು ಆಚರಿಸಲಾಗುತ್ತದೆ. ಈ ದಿನವು ಬ್ರೈಲ್ ಲಿಪಿಯ ಆವಿಷ್ಕಾರಕ ಲೂಯಿಸ್ ಬ್ರೈಲ್ ಅವರ ಜನ್ಮದಿನದ ಸ್ಮರಣಾರ್ಥವಾಗಿ ಆಚರಣೆ ಮಾಡಲಾಗುತ್ತದೆ.

**2) ರಾಷ್ಟ್ರೀಯ ಟ್ರಿವಿಯಾ ದಿನ**

ರಾಷ್ಟ್ರೀಯ ಟ್ರಿವಿಯಾ ದಿನವನ್ನು ಪ್ರತಿವರ್ಷ ಜನವರಿ 4ರಂದು ಆಚರಿಸಲಾಗುತ್ತದೆ. ಈ ದಿನವು ಸಾಮಾನ್ಯ ಜ್ಞಾನ, ಆಸಕ್ತಿದಾಯಕ ಮಾಹಿತಿ, ರೋಚಕ ವಿಚಾರಗಳು ಮತ್ತು ಪ್ರಶ್ನೋತ್ತರ ಆಟಗಳ ಮೂಲಕ ಕಲಿಕೆ ಹಾಗೂ ಕುತೂಹಲವನ್ನು ಉತ್ತೇಜಿಸುವ ಉದ್ದೇಶ ಹೊಂದಿದೆ.

## ಸುಭಾಷಿತ

ಕಲಿಯಲು ತಿಕಸ್ಕರಿಸುವುದು
ಜೀವಿಸಲು ತಿರಸ್ಕರಿಸುವುದಕ್ಕೆ
ಸಮನಾದದು.

ರಾಮಕೃಷ್ಣ ಪರಮಹಂಸ

## 2026ರ ಜೂನ್ ಒಳಗಡೆ ತಂಗಭದ್ರಾ ಡ್ಯಾಮಗೆ ಹೊಸ ಕ್ರಸ್ಟ್ ಗೇಟ್ ಅಳವಡಿಸುತ್ತೇವೆ: ಸಿಎಂ ಸಿದ್ದರಾಮಯ್ಯ

❑ ನೈಜ್ಯ ದೇಸೆ ನ್ಯೂಸ್

ರಾಯಚೂರು: ಜನವರಿ 03 (ಕರ್ನಾಟಕ ವಾರ್ತೆ): ಏನೇ ತೊಂದರೆಯಾದರೂ, ಎಷ್ಟೇ ಖರ್ಚಾದರು ಸಹ ತುಂಗಭದ್ರಾ ಡ್ಯಾಮಗೆ ಬರುವ ಜೂನ್ ಒಳಗಡೆ ಹೊಸ ಕ್ರಸ್ಟ್ ಗೇಟ್ ಅಳವಡಿಸಿ, ಮುಂದಿನ ಮುಂಗಾರು ಬೆಳೆಗೆ ನೀರು ಹರಿಸಿ ರೈತರಿಗೆ ನೀಡಿದ ಮಾತು ಉಳಿಸಿಕೊಳ್ಳುತ್ತೇವೆ ಎಂದು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಹೇಳಿದರು.

ತಾಲೂಕಾಡಳಿತ, ತಾಲೂಕು ಪಂಚಾಯತ್ ಹಾಗೂ ಧಾರ್ಮಿಕ ದತ್ತಿ ಇಲಾಖೆಯ ಅಂಬಾದೇವಿ ವ್ಯವಸ್ಥಾಪನಾ ಸಮಿತಿಯ ಆಶ್ರಯದಲ್ಲಿ ಸಿಂಧನೂರ ತಾಲೂಕಿನ ಅಂಬಾಮಠದ ಆವರಣದಲ್ಲಿ ಜನವರಿ 3ರಂದು ನಡೆದ ಅಂಬಾದೇವಿ ಮಹಾರಥೋತ್ಸವ ಮತ್ತು ಜಂಬೂ ಸವಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು. ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದ ಮುಖ್ಯಮಂತ್ರಿಗಳು, 431 ಕೋಟಿ ರೂ ವೆಚ್ಚದಲ್ಲಿ ಪಾಪಯ್ಯ ಟನೇಲ್ ಕಾರ್ಯ ಮತ್ತು 33 ಗೇಟ್ ಅಳವಡಿಸುವ ಕಾರ್ಯ ಮಾಡುತ್ತಿದ್ದೇವೆ ಎಂದು ತಿಳಿಸಿದರು.





ಸಿಂಧನೂರ ಕ್ಷೇತ್ರದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ನೀಡಿದ ಅನುದಾನವನ್ನು ಶಾಸಕರಾದ ಹಂಪನಗೌಡ ಬಾದರ್ಲಿ ಅವರು ಸದ್ಬಳಕೆ ಮಾಡುತ್ತಿರುವುದು ಸಂತಷದ ಸಂಗತಿಯಾಗಿದೆ. ಸಿಂಧನೂರ ಕ್ಷೇತ್ರದ ಕುಡಿಯುವ ನೀರಿನ ಕೆರೆಗಳ ನಿರ್ಮಾಣ ಅಭಿವೃದ್ಧಿಗೆ 13.42 ಕೋಟಿ ರೂ., ಸಾಲಗುಂದ ಏತ ನೀರಾವರಿ ಯೋಜನೆಗೆ 71 ಕೋಟಿ ರೂ., ಒಳಬಳ್ಳಾರಿ ಏತ ನೀರಾವರಿ ಯೋಜನೆಗೆ 43.10 ಕೋಟಿ ರೂ., ಮುಳ್ಳೂರ ಗ್ರಾಮದ ಹತ್ತಿರ ಬ್ರಿಜ್ ಕಂ ಬ್ಯಾರೇಜ್ ಯೋಜನೆಗೆ 29 ಕೋಟಿ ರೂ ವೆಚ್ಚ ಮಾಡಿ ಈ ಭಾಗದ ಅನ್ನದಾತರಿಗೆ ಅನುಕೂಲ ಕಲ್ಪಿಸುತ್ತಿದ್ದೇವೆ ಎಂದು ತಿಳಿಸಿದರು. 42 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರು ಹರಿಸುವ ಪ್ರಯತ್ನದಲ್ಲಿ ಈಗಾಗಲೇ 30 ಲಕ್ಷ ಪ್ರದೇಶಕ್ಕೆ ನೀರು ಕೊಟ್ಟಿದ್ದೇವೆ. ಉಳಿದ 12 ಲಕ್ಷ ಹೆಕ್ಟೇರ ಪ್ರದೇಶಕ್ಕೆ ಸಹ ನೀರು ಹರಿಸುವ ಕಾರ್ಯ ನಡೆಯುತ್ತಿದೆ ಎಂದರು. ರಾಜ್ಯ ಸರ್ಕಾರದ ಖಜಾನೆಯಲ್ಲಿ ಹಣ ಇಲ್ಲ ಎನ್ನುವುದು ಅಪ್ಪಟ ಸುಳ್ಳು. ನಾವು ಹಿಂದೆ ಬಿದ್ದಿಲ್ಲ. ಅಭಿವೃದ್ಧಿ ಕಾರ್ಯಗಳು ಹಾಗೂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಕಾರ್ಯ ಎರಡೂ ನಡೆಯುತ್ತಿವೆ.

ಅನ್ನಭಾಗ್ಯ, ಗೃಹ ಲಕ್ಷ್ಮಿ, ಗೃಹ ಜ್ಯೋತಿ, ಶಕ್ತಿ, ಯುವನಿಧಿ ಪಂಚ ಗ್ಯಾರಂಟಿ ಯೋಜನೆಗಳಿಗೆ ಇದುವರೆಗೆ ರಾಜ್ಯ ಸರ್ಕಾರವು 1,12,000 ಕೋಟಿ ರೂ ಖರ್ಚು ಮಾಡಿದ್ದೇವೆ. ಪ್ರಸಕ್ತ 2026ನೇ ಸಾಲಿನಲ್ಲೂ ಸಹ ಮತ್ತೆ 52 ಸಾವಿರ ಕೋಟಿ ರೂ ಖರ್ಚು ಮಾಡುತ್ತಿದ್ದೇವೆ. ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದ ಬಳಿಕ ತಲಾ ಆದಾಯದಲ್ಲಿ ಕರ್ನಾಟಕ ರಾಜ್ಯವು ಇಡಿ

4ನೇ ಪುಟಕ್ಕೆ

## ಜಾನೇಕಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ2 ನೇ ಪೋಷಕ-ಶಿಕ್ಷಕ ಸಭೆ ಯಶಸ್ವಿ


❑ ನೈಜ್ಯ ದೇಸೆ ನ್ಯೂಸ್

**ಜಾನೇಕಲ್: ಜ 3 ದಿನಾಂಕ 3.01.2026 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಜಾನೇಕಲ್ ಶಾಲೆಯಲ್ಲಿ 2 ನೇ ಪೋಷಕ-ಶಿಕ್ಷಕ ಮಹಾ ಸಭೆ ಯನ್ನು ಏರ್ಪಡಿಸಲಾಯಿತು. ಈ ಕಾರ್ಯಕ್ರಮ ದ ದಿನ ಮಕ್ಕಳ ಶೈಕ್ಷಣಿಕ ಪ್ರಗತಿ ಮತ್ತು ಈಐಬಿ ,LBA ಕುರಿತು ಮಕ್ಕಳಿಗೆ ಮತ್ತು ಪಾಲಕರಿಗೆ ಜಾಗೃತಿ ಮೂಡಿಸಿ ಜೊತೆಗೆ ಬಾಲ್ಯ ವಿವಾಹ ತಡೆಗಟ್ಟುವ ಕುರಿತು ಮಾಹಿತಿ ನೀಡಲಾಗಿದೆ.**



ಕರ್ನಾಟಕ ಸರ್ಕಾರ ಮಕ್ಕಳಿಗೆ ನೀಡುವ ಬಿಸಿಯೂಟ ಮೊಟ್ಟೆ ಬಾಳೆಹಣ್ಣು ಮತ್ತು ಶೈಕ್ಷಣಿಕ ಪ್ರಗತಿ ಅಂಶಗಳ ಕುರಿತು ಪಾಲಕರಿಗೆ ತಿಳಿಸಿದರು ಮತ್ತು ಮನೆಯಲ್ಲಿ ಮಕ್ಕಳ ಕಲಿಕೆಗೆ ಪೂರಕವಾದ ಕಲಿಕಾ ವಾತಾವರಣ ಮನೆಯಲ್ಲಿ ನೀಡುವಂತೆ ಮನವೊಲಿಸುವುದು ಸೇರಿದಂತೆ ಹಲವು ಸಮಸ್ಯೆಗಳು ಬಗೆಹರಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಎಂದು ಮುಖ್ಯಗುರುಗಳು ಜೈನೂಲ್ ಜಾಹಾಗಿರದಾರ್ ಮತ್ತು ಅಐಕ ವೆಂಕಟೇಶ ಮತ್ತು ಅತಿಥಿ ಶಿಕ್ಷಕರಾದ ರವಿಕುಮಾರ್, ರಂಗನಾಥ, ಅಂಬರೀಶ ,ಮಹೇಶ್ ಮತ್ತು ಉಮಾಶ್ರೀ ಹಾಗೂ ಪಾಲಕರಾದ ಅಮರೇಶ್ ಕುಂಬಾರ, ಅಮರೇಶ್ ನಾಯಕ,ತಿರುಪತಿ, ಚೆನ್ನಬಸವ, ಬಾಲಸ್ವಾಮಿ ಅನೇಕ ಪಾಲಕರು ಗ್ರಾಮ ಪಂಚಾಯಿತಿ ಸದಸ್ಯರು ಸೇರಿದಂತೆ ಊರಿನ ಎಲ್ಲ ಸದಸ್ಯರು ಉಪಸ್ಥಿತರಿದ್ದರು.

## ಜಿಲ್ಲಾಡಳಿತ ದಿಂದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಶಿಲ್ಪಕಲಾ ಕೌಶಲ್ಯಕ್ಕೆ ಅಮರಶಿಲ್ಪಿ ಜಕಣಾಚಾರಿಯವರು ಕೊಡುಗೆ ಅಪಾರ: ತಹಶಿಲ್ದಾರ್ ಸುರೇಶ್ ವರ್ಮಾ



❑ ನೈಜ್ಯ ದೇಸೆ ನ್ಯೂಸ್

ರಾಯಚೂರು: ಜನವರಿ 03 (ಕರ್ನಾಟಕ ವಾರ್ತೆ): ಸದಾಕಾಲಕ್ಕೂ ಜೀವಂತವಾಗಿರುವ ಭಾರತೀಯ ಶಿಲ್ಪಕಲಾ ಕೌಶಲ್ಯಕ್ಕೆ ಅಮರಶಿಲ್ಪಿ ಜಕಣಾಚಾರಿಯವರು ಕೊಡುಗೆ ಅಪಾರವಾಗಿದೆಂದು ಎಂದು ರಾಯಚೂರು ತಹಶಿಲ್ದಾರ್ ಸುರೇಶ್ ವರ್ಮಾ ಅವರು ಹೇಳಿದರು.

ಜನವರಿ 03ರ ಶನಿವಾರ ದಂದು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಯಚೂರು ಇವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಭಾರತ ಸೇರಿದಂತೆ ವಿಶ್ವದ ವಿವಿಧ ಕಡೆ ಜಕಣಾಚಾರಿಯವರ ಶಿಲ್ಪಕಲೆಗಳು ಇಂದಿಗೂ ಜೀವಂತವಾಗಿದೆ. ಶಿಲ್ಪಕಲೆಗೆ ಅವರು ನೀಡಿರುವ ಕೊಡುಗೆಗೆ ಇವುಗಳೇ ಸಾಕ್ಷಿ. ಬೇಲೂರು, ಹಳೇಬೀಡು, ಸೋಮನಾಥ-'ಪುರ ದೇವಾಲಯಗಳಲ್ಲಿನ ಶಿಲ್ಪಕಲೆ ವಿಶ್ವಕರ್ಮರ ಪ್ರಸ್ತುತತೆಯನ್ನು ಬಿಂಬಿಸುತ್ತಿದೆ.


ನಶಿಸಿಹೋಗುತ್ತಿರುವ ವಿಶ್ವಕರ್ಮರ ಕುಲಕಸುಬುಗಳನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸಿ, ಮುಂದುವರಿಸಲು ಎಲ್ಲರೂ ಪ್ರಯತ್ನಿಸಬೇಕು ಎಂದರು. ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಅವರ ಆಚಾರ ವಿಚಾರಗಳನ್ನು

4ನೇ ಪುಟಕ್ಕೆ

## ಭಾರತದ ಮಹಿಳಾ ಶಿಕ್ಷಣ ಪಿತಾಮಹಿ ಸಾವಿತ್ರಿಬಾಯಿ ಫುಲೆ ಜನ್ಮದಿನಾಚರಣೆ

❑ ನೈಜ್ಯ ದೇಸೆ ನ್ಯೂಸ್

**ಮಸ್ಕಿ: ತಾಲೂಕಿನ ಹಾಲಾಪೂರದ ಜನನಿ ಪದವಿ ಪೂರ್ವ ಕಾಲೇಜಿನಲ್ಲಿ ಭಾರತದ ಮೊದಲ ಮಹಿಳಾ ಶಿಕ್ಷಕಿ, ಶಿಕ್ಷಣದ ಪಿತಾಮಹಿ ಸಾವಿತ್ರಿಬಾಯಿ ಫುಲೆ ರವರ ಜನ್ಮದಿನಾಚರಣೆ ಕಾರ್ಯಕ್ರಮ ಮಾಡಲಾಯಿತು.**



ಸಾವಿತ್ರಿಬಾಯಿ ಫುಲೆ ರವರು ಸಮಾಜ ಸುಧಾರಕರಾಗಿ ಸೇವೆ ಸಲ್ಲಿಸಿದ ಕೊಡುಗೆಗಳು ಅಪಾರ, ವಿಶೇಷವಾಗಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಅತ್ಯಂತ ಉತ್ಸಾಹದಾಯಕವಾಗಿ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದರು, ಸತಿ ಪದ್ಧತಿ, ಬಾಲ್ಯ ವಿವಾಹ, ಅಸ್ಪೃಶ್ಯತೆ, ಜಾತಿ ತಾರತಮ್ಯದ ವಿರುದ್ಧ ಹೋರಾಡಿ ಸಮಾಜದಲ್ಲಿ ನ್ಯಾಯಕ್ಕಾಗಿ ದುಡಿದು ಅವಿರುತ ಶ್ರಮ ನೀಡಿ, ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿ ಸಾಮಾಜಿಕ ಅಂಕುಡೊಂಕುಗಳನ್ನು ಎದುರಿಸಿದ ಅಕ್ಷರಮಾತೆ ಸಾವಿತ್ರಿಬಾಯಿ ಬಾಫುಲೆ ಆದರ್ಶ ಪ್ರಾಯರು. ಈ ಸಂದರ್ಭದಲ್ಲಿ ಪ್ರಾಚಾರ್ಯ ನಾಗೇಶ ಜಂಗಮರಹಳ್ಳಿ, ಉಪನ್ಯಾಸಕರಾದ ಸಿದ್ದಾರ್ಥ್ ಪೊ.ಪಾ, ಮರಿಸ್ವಾಮಿ, ದುರಗೇಶ ಹಾಗೂ ವಿದ್ಯಾರ್ಥಿಗಳು ಇದ್ದರು.

## ಸಾವಿತ್ರಿಬಾಯಿ ಫುಲೆ ಜನ್ಮದಿನಾಚರಣೆ ಅಂಗವಾಗಿ 'ಎನ್ ಎಸ್ ಎಸ್ ಕಪ್ ' ಕ್ರೀಡಾಕೂಟಕ್ಕೆ ಚಾಲನೆ

❑ ನೈಜ್ಯ ದೇಸೆ ನ್ಯೂಸ್

**ಮಾನ್ವಿ: ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಎನ್.ಎಸ್.ಎಸ್ ಘಟಕದ ವತಿಯಿಂದ ಅಕ್ಷರದ ಅವ್ವ ಮಾತೆ ಸಾವಿತ್ರಿಬಾಯಿ ಫುಲೆ ಅವರ ಜನ್ಮ ದಿನಾಚರಣೆಯ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ 'NSS Cup' ಪಂದ್ಯಾವಳಿಯನ್ನು ಸಂಸ್ಥೆಯ ಉಪಪ್ರಾಂಶುಪಾಲರಾದ ಸುಧಾಕರ ಸಂಜೀವ್ ಉದ್ಘಾಟಿಸಿದರು.**



ಈ ಸಂದರ್ಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿನಿಯರು ತಮ್ಮ ಜೀವನದಲ್ಲಿ ಮಾತೆ ಸಾವಿತ್ರಿಬಾಯಿ ಫುಲೆ ಅವರ ಆದರ್ಶಗಳು ಹಾಗೂ ಅವರ ಹೋರಾಟದ ಬದುಕನ್ನು ಅಳವಡಿಸಿಕೊಂಡು ಉತ್ತಮ ಸಾಧನೆ ಮಾಡಬೇಕು ಎಂದು ಕಿವಿಮಾತು ಹೇಳಿದರು. ಅಲ್ಲದೆ, ಘಟಕದಿಂದ ಹಮ್ಮಿಕೊಂಡಿರುವ ವಾರ್ಷಿಕ ಕ್ರೀಡಾ ಚಟುವಟಿಕೆಗಳಲ್ಲಿ ಎಲ್ಲಾ ವಿದ್ಯಾರ್ಥಿನಿಯರು ಕ್ರೀಡಾ ಮನೋಭಾವದಿಂದ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಬೇಕು ಎಂದು ಪ್ರೋತ್ಸಾಹಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಭಾಷಣ ಮಾಡಿದ ಮಂಜುಳಾ ಹಿರೇಮಠ್, ಸಾವಿತ್ರಿಬಾಯಿ ಫುಲೆ ಅವರ ಜೀವನ ಚರಿತ್ರೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಅವರು ಮಾಡಿದ ಸಾಧನೆಗಳ ಬಗ್ಗೆ ವಿದ್ಯಾರ್ಥಿನಿಯರಿಗೆ ಸಂಪೂರ್ಣವಾಗಿ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಶಿಕ್ಷಕರಾದ ಬಂಡೆಮ್ಮ, ಅಶೋಕ್ ಕುಮಾರ್ ಮಳ್ಳಿ,ಮಂಜುಳಾ ಹಿರೇಮಠ, ರಜನಿ, ಶೇಖ್ ಹುಸೇನ್, ಚನ್ನಬಸವರಾಜ, ಪ್ರಮೋದ ಕುಮಾರ, ಶ್ರೀಮತಿ ಕಟ್ಟಿ, ನುಜಹತ್ ಫಾತಿಮಾ, ಅನ್ವರ್ ಹುಸೇನ್, ಜಯಭೀಮ ಭಾವಿಕಟ್ಟಿ, ಈರಾಮಣಿ,ಶರತ್ ಕುಮಾರ್, ರಾಜಶೇಖರ. ಎಚ್, ರೇಣುಕಾ ಇದ್ದರು.

## ಎಸ್ಎಸ್ಎಲ್ಸಿ ಫಲಿತಾಂಶ ಸುಧಾರಣೆಗಾಗಿ ವಿಜ್ಞಾನ ಶಿಕ್ಷಕರಿಗೆ ತರಬೇತಿ ಕಾರ್ಯಾಗಾರ ವಿಜ್ಞಾನ ಕಲಿಕೆಗೆ ಮಕ್ಕಳಲ್ಲಿ ಉತ್ತೇಜನ ಅಗತ್ಯ :ಚಂದ್ರಶೇಖರ ದೊಡ್ಡಮನಿ

❑ ನೈಜ್ಯ ದೇಸೆ ನ್ಯೂಸ್

**ಮಾನ್ವಿ: ಎಸ್ಎಸ್ಎಲ್ಸಿ ಫಲಿತಾಂಶ ಸಾಧನೆಗಾಗಿ ವಿಜ್ಞಾನ ವಿಷಯ ಶಿಕ್ಷಕರು ವಿಶೇಷ ಕಲಿಕಾ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಆಸಕ್ತಿ ಮೂಡಿಸುವದು ಅಗತ್ಯವಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ ದೊಡ್ಡಮನಿ ಹೇಳಿದರು.**

ಪಟ್ಟಣದ ಬಾಲಕರ ಸರ್ಕಾರಿ ಪ್ರೌಢಶಾಲೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ರಾಯಚೂರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಮಾನವಿ ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಎಸ್ಎಸ್ಎಲ್ಸಿ ಫಲಿತಾಂಶ ಸುಧಾರಣೆಗಾಗಿ ವಿಜ್ಞಾನ ವಿಷಯ ಶಿಕ್ಷಕರ ಒಂದು ದಿನದ ಕಾರ್ಯಾಗಾರವನ್ನು ಸಸಿಗೆ ನೀರು ಎರೆದು ಉದ್ಘಾಟಿಸಿ ಮಾತನಾಡಿದ




ಅವರು, ವಿಜ್ಞಾನ ಸದಾ ಕೌತುಕ, ಹೊಸತನದಿಂದ ಕೂಡಿದ್ದರಿಂದ ವಿದ್ಯಾರ್ಥಿಗಳಲ್ಲಿ ವಿಜ್ಞಾನ ವಿಷಯದ ಕುರಿತಾದ ಹಚ್ಚಿನ ಅಭ್ಯಾಸ, ಜ್ಞಾನ ಅಗತ್ಯವಿದ್ದು, ಈ ನಿಟ್ಟಿನಲ್ಲಿ ವಿಜ್ಞಾನ ವಿಷಯ ಶಿಕ್ಷಕರು ಮಕ್ಕಳಲ್ಲಿ ವಿಜ್ಞಾನ ವಿಷಯ ಕುರಿತು ಆಸಕ್ತಿ ಹುಟ್ಟಿಸುವ ಮೂಲಕ ವಿಶೇಷ ಮಾದರಿ ಪ್ರಯೋಗ ಚಟುವಟಿಕೆಗಳನ್ನು ಶಾಲೆಗಳಲ್ಲಿ ಮಾಡುವದು ಅಗತ್ಯವಾಗಿದೆ.

ಅ ಮೂಲಕ ವಿದ್ಯಾರ್ಥಿಗಳಲ್ಲಿ ವಿಜ್ಞಾನ ವಿಷಯ ಕುರಿತು ಕುತೂಹಲ ಹೆಚ್ಚಾಗಿ ನಿರಂತರ ಅಭ್ಯಾಸದಲ್ಲಿ ತೊಡಿಕೊಂಡಾಗ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳಿಸಲು ಸಾಧ್ಯವಿದೆ ಎಂದರು. ಈ ಬಾರಿಯ ಎಸ್ಎಸ್ಎಲ್ಸಿ ಫಲಿತಾಂಶ ಸುಧಾರಣೆಯ ದೃಷ್ಟಿಯಿಂದ ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಮಾನ್ವಿ ತಾಲೂಕಿಗೆ ವಿಶೇಷ ಆದ್ಯತೆಯನ್ನು ನೀಡಿ ಈ ಬಾರಿ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಮಕ್ಕಳ ಕಲಿಕೆಗೆ ಉಪಯುಕ್ತವಾದ ಶಾಲೆಗಳಲ್ಲಿ ವಿಜ್ಞಾನ ವಸ್ತುಗಳ ಪ್ರದರ್ಶನ ಮತ್ತು ಎಸ್ಎಸ್-ಎಲ್ಸಿ ಫಲಿತಾಂಶ ಸುಧಾರಣೆಗಾಗಿ ವಿಜ್ಞಾನ ವಿಷಯ ಶಿಕ್ಷಕರಿಗೆ ತರಬೇತಿ ಕಾರ್ಯಾಗಾರ ಹಾಗೂ ದೈಹಿಕ ಶಿಕ್ಷಕರಿಗೆ ಪ್ರಥಮ ಚಿಕಿತ್ಸೆ ಕುರಿತು ಕಾರ್ಯಾಗಾರ ದಂತಹ ಮಹತ್ವದ ಕಾರ್ಯಕ್ರಮಗಳನ್ನು ನೀಡಿರುವದು ಶ್ಲಾಘನೀಯವಾಗಿದೆ.

ಈ ಬಾರಿಯ ಎಸ್ಎಸ್ಎಲ್ಸಿ ಫಲಿತಾಂಶ ಹೆಚ್ಚಳಕ್ಕೆ ಪ್ರತಿಯೊಬ್ಬ ಶಿಕ್ಷಕರು ವಿಷಯವಾರು ಹೆಚ್ಚಿನಕಾಳಜಿ ವಹಿಸಬೇಕಿದೆ. ವೈಯಕ್ತಿಕ ವಿಚಾರ ಕಾರ್ಯಗಳನ್ನು ಬದಿಗಟ್ಟು ಮಕ್ಕಳ ಫಲಿತಾಂಶ ಸಾಧನೆಗೆ ಆದ್ಯತೆ ನೀಡಬೇಕು. ಸಿ ಮತ್ತು ಸಿ+ ವಿದ್ಯಾರ್ಥಿಗಳಿಗೆ 40+ ವಿಜನ್ ಅನುಷ್ಠಾನಕ್ಕೆ ತಂದು ಎಲ್ಲಾ ವಿದ್ಯಾರ್ಥಿಗಳ ಉತ್ತೀರ್ಣಕ್ಕಾಗಿ ಶ್ರಮಿಸಬೇಕಿದೆ. ಎಲ್ಲಾ ವಿಷಯ ಶಿಕ್ಷಕರ ಕುರಿತಾಗಿ ಶಾಲೆ ಮುಖ್ಯ ಶಿಕ್ಷಕರು ನಿಗಾ ವಹಿಸಿ ಫಲಿತಾಂಶ ಹೆಚ್ಚಕ್ಕೆ ಸೂಕ್ತ ಮಾರ್ಗದರ್ಶನ ನೀಡಬೇಕು.

ಪೂರ್ವಸಿದ್ಧತಾ ಪರೀಕ್ಷೆ ತಯಾರಿ ಸೇರಿದಂತೆ ಎಫ್ಎ ಪರೀಕ್ಷೆಗಳ ಫಲಿತಾಂಶ ಮಾಹಿತಿಗಳನ್ನು ಸಮಯಕ್ಕೆ ಸರಿಯಾಗಿ ಇಲಾಖೆಗೆ ನೀಡುವಂತೆ ಸೂಚಿಸಿದರು. ನಂತರ ತರಬೇತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಕನ್ಯಾಶಾಲೆಯ ಸಹ ಶಿಕ್ಷಕಿ ರೇಖಾ, ಮದ್ಲಾಪೂರು ಸಹ ಶಿಕ್ಷಕ ಸಂದೀಪ, ಅತ್ತನೂರು ಶಾಲೆ ಸಹ ಶಿಕ್ಷಕಿ ಉಮಾ, ಮಧು ವಿಜ್ಞಾನ ವಿಷಯ ಕುರಿತು ತರಬೇತಿ ನೀಡಿದರು. ಈ ಸಂದರ್ಭದಲ್ಲಿ ಎಸ್ಎಸ್ಎಲ್ಸಿ ಫಲಿತಾಂಶ ತಾಲೂಕ ನೋಡಲ್ ಅಧಿಕಾರಿ ಹನುಮೇಶ ನಾಯಕ, ಇಸಿಓ ಗಳಾದ ಮಹೇಶ, ಸಂತೋಷ,ತರಬೇತಿ ನೋಡಲ್ ಅಧಿಕಾರಿ ಸಿದ್ಧಲಿಂಗೇಶ್ವರ ಸೇರಿದಂತೆ ವಿಜ್ಞಾನ ವಿಷಯ ಶಿಕ್ಷಕರು ಉಪಸ್ಥಿತರಿದ್ದರು

## ಸಾಹಿತ್ಯ ಸಿಂಚನ

ಬೇಡಿ.. ಬೇಡಿ.. ಬೇಡಿ..!

ಬೇಡಿ ಕಿತ್ಕೊಂಡು ತಿನ್ನಬೇಡಿ
ಬೇಡಿ ಕಚ್ಕೊಂಡು ತಿನ್ನಬೇಡಿ
ಬೇಡಿ ಮುಚ್ಕೊಂಡು ತಿನ್ನಬೇಡಿ
ಆದ್ರೆ ಹಂಚ್ಕೊಂಡು ತಿನ್ನೋದನ್ನ
ಮಾತ್ರ ಎಂದೆಂದು ಮರೀಬೇಡಿ.!

ಬೇಡಿ ಬೇಡ್ಕೊಂಡು ತಿನ್ನಬೇಡಿ
ಬೇಡಿ ಹೊಡ್ಕೊಂಡು ತಿನ್ನಬೇಡಿ
ಬೇಡಿ ಕಸಿದ್ಕೊಂಡು ತಿನ್ನಬೇಡಿ
ಆದ್ರೆ ದುಡ್ಕೊಂಡು ತಿನ್ನೋದನ್ನ
ಮಾತ್ರ ಎಂದಿಗೂ ಬಿಡಬೇಡಿ.!

ಬೇಡ ಪೀಡಿಸ್ಕೊಂಡು ತಿನ್ನಬೇಡಿ
ಬೇಡಿ ಕಾಡಿಸ್ಕೊಂಡು ತಿನ್ನಬೇಡಿ
ಬೇಡಿ ಅಳಿಸ್ಕೊಂಡು ತಿನ್ನಬೇಡಿ
ಆದ್ರೆ ನಗಿಸ್ಕೊಂಡು ತಿನ್ನೋದನ್ನ
ಮಾತ್ರ ಯಾವತ್ತಿಗು ಬಿಡಬೇಡಿ.!

ಬೇಡಿ ಬೈದಾಡ್ಕೊಂಡು ತಿನ್ನಬೇಡಿ
ಬೇಡಿ ಬಡಿದಾಡ್ಕೊಂಡು ತಿನ್ನಬೇಡಿ
ಬೇಡಿ ಹೊಡೆದಾಡ್ಕೊಂದು ತಿನ್ನಬೇಡಿ
ಆದ್ರೆ ನಿಯ್ಯತ್ತಿನಿಂದ ತಿನ್ನೋದನ್ನ
ಮಾತ್ರ ಎಲ್ಲಿದ್ದರೂ ಬಿಡಬೇಡಿ.!

ಬೇಡಿ ನೋಯಿಸ್ಕೊಂಡು ತಿನ್ನಬೇಡಿ
ಬೇಡಿ ಸತಾಯ್ಸಿಕೊಂಡು ತಿನ್ನಬೇಡಿ
ಬೇಡಿ ಸಾಯಿಸ್ಕೊಂಡು ತಿನ್ನಬೇಡಿ
ಆದ್ರೆ ಸ್ವಂತಶಕ್ತಿಯಿಂದ ತಿನ್ನೋದನ್ನ
ಮಾತ್ರ ಯಾವಕಾಲಕ್ಕೂ ಮರೀಬೇಡಿ.!

ತಿನ್ನುವುದು ಎರಡೇ ಎರಡು ತುತ್ತು
ತಿನ್ನುವುದು ಕೇವಲ ಮೂರೇ ಹೊತ್ತು
ತಿನ್ನುವುದು ದೈವಕಾರುಣ್ಯದ ಸ್ವತ್ತು
ಮತ್ತೇಕೆ ಪರಿ ಪರಿ ಕುಯುಕ್ತಿ ಮಸಲತ್ತು?
ಮರೆತು ಮೆರೆದರೆ ಜೀವಜೀವನ ರಾಡಿ
ಕರಗಳಿಗೆ ಬೇಡಿ ಎಂಬುದ ಮರಿಬೇಡಿ.!

ಎ.ಎನ್.ರಮೇಶ್.ಗುಬ್ಬಿ.

## "ಕರ್ನಾಟಕ ಸೇವಾ ರತ್ನ" ಪ್ರಶಸ್ತಿಗೆ ಪಿಎಸ್ಐ ಬಿ ನಾಗಪ್ಪ ಆಯ್ಕೆ

ನೈಜ್ಯ ದೆಸೆ ನ್ಯೂಸ್

ಶಿರಸಿ: ದಶಕಗಳ ಕಾಲದಿಂದ ಕರ್ನಾಟಕ ಪೊಲೀಸ್ ಸೇವೆಯಲ್ಲಿ ನಿಷ್ಠೆಯಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ, ಮುಖ್ಯಮಂತ್ರಿ ಪದಕ ವಿಜೇತರೂ ಆಗಿರುವ ಶಿರಸಿಯ ನಗರ ಠಾಣೆಯ ಪಿಎಸ್ಐ ನಾಗಪ್ಪ ಬಿ ಇವರು ಮೂಲತಃ ರಾಯಚೂರು ಜಿಲ್ಲೆಯ ಪಾಮನಕಲ್ಲೂರ ಗ್ರಾಮದವರು ಅವರು ಕರ್ನಾಟಕ ಪ್ರೆಸ್ ಕ್ಲಬ್ ವಾರ್ಷಿಕ ಪ್ರಶಸ್ತೆಗೆ ಆಯ್ಕೆಯಾಗಿದ್ದಾರೆ.ನಾಗಪ್ಪ ಅವರ ಪಾಹಿತ್ಯ ಹಾಗೂ ಸಮಾಜ ಸೇವೆ ಗುರುತಿಸಿ ಕರ್ನಾಟಕ ಸೇವಾ ರತ್ನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.



ಬೆಂಗಳೂರಿನಲ್ಲಿ ನಡೆಯಲಿರುವ "ಸಾಧಕರ ಸಮಾಗಮ" ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಲಾಗುತ್ತಿದೆ. ಬದುಕಿನೊಂದಿಗೆ ಸಾಧಕರ ಜೀವನವು ಕತ್ತಲೆಯಲ್ಲಿ ಹೊಳೆಯುವ ನಕ್ಷತ್ರಗಳಂತೆ, ಕುಟುಂಬ ಮತ್ತು ಸಮಾಜದೊಂದಿಗೆ ಹೋರಾಟ ಮಾಡುವ ಜೊತೆಗೆ ಸೇವಾ ಕ್ಷೇತ್ರದಲ್ಲಿ ಸಾಧನೆ ಮಾಡುವುದು ಸುಲಭವಲ್ಲ. ಆದ–'ರೂ ಎಲ್ಲವನ್ನು ಮೆಟ್ಟಿನಿಂತು ಸಾಧಿಸುವ ಛಲ ತೋರಿದ ನಿಮ್ಮ ಧೈರ್ಯ ಮತ್ತು ಆತ್ಮಾಭಿಮಾನಕ್ಕೆ ಈ ನಾಡು ಧನ್ಯ. ನಿಮ್ಮಂತ ಸಾಧಕರನ್ನು ಗೌರವಿಸುವುದು ಮತ್ತು ಸ್ವಲ್ಪ ಸಮಯ ನಿಮ್ಮೊಂದಿಗೆ ಕಳೆಯುವುದೇ ನಮ್ಮ ಸೌಭಾಗ್ಯ ಎನ್ನಬಹುದು ' ಎಂದು ಕರ್ನಾಟಕ ಪ್ರೆಸ್ ಕ್ಲಬ್ ವತಿಯಿಂದ ನಾಗಪ್ಪ ಅವರಿಗೆ ಪ್ರಶಂಸನೀಯವಾಗಿ ಪತ್ರ ಬರೆಯಲಾಗಿದೆ.ಸಾಧಕರ ಸಮಾಗಮ ಕಾರ್ಯಕ್ರಮವು ಬೆಂಗಳೂರಿನ ನಾಗರಭಾವಿಯ ಕಲಾಗ್ರಾಮದಲ್ಲಿ ಜ.13 ರಂದು ಸಂಜೆ 4.00 ಗಂಟೆಗೆ ಜರುಗಲಿದ್ದು, ಇದೊಂದು ರಾಜ್ಯ ಮಟ್ಟದ ಕಾರ್ಯಕ್ರಮವಾಗಿದೆ. ಇನ್ನು ಈ ಹಿಂದೆಯೂ ನಾಗಪ್ಪ ಅವರು ಸಾಹಿತ್ಯಕ್ಕಾಗಿ ಅನೇಕ ಗೌರವ ಸ್ವೀಕರಿಸಿದ್ದಾರೆ.

# ಅನಾಥರಿಗೆ ಸಹಾಯ ಸಹಕಾರ ಮಾಡುವ ಸಂಕಲ್ಪದ ಆಶೀರ್ವಾದವೇ ನಮ್ಮ ಸೇವೆಗೆ ಶ್ರೀರಕ್ಷೆ: ಯಶ್ ಸಕಲೇಚಾ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಜೆ. ಪಿ. ಪಿ. ಜೈನ್ ಯುವ ಫೌಂಡೇಶನ್ ಸಿಂಧನೂರು ವತಿಯಿಂದ ಜೈನ್ ಸಮಾಜದ ಗುರುಗಳಾದ ಆಚಾರ್ಯ ಪಾಶ್ವಚಂದ್ರ ಜೀ ಜೈನ್ ಗುರುಗಳ 77ನೇ ವರ್ಷದ ಜನ್ಮ ವರ್ಧಂತಿ ಅಂಗವಾಗಿ ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸಿ ಅಗತ್ಯ ಆಹಾರ ವಸ್ತುಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ನೆರವೇರಿಸಿದರು.

ಈ ಕಾರ್ಯಕ್ರಮದಲ್ಲಿ ಯಶ್ ಸಕಲೇಚಾ ಮಾತನಾಡಿ ನಮ್ಮ ಗುರುಗಳು ನಮ್ಮ ಸಮಾಜದ ಪ್ರತಿಯೊಬ್ಬ ಯುವಕರಲ್ಲಿ ಸೇವಾ ಮನೋಭಾವನೆಯ ಪಾಠವನ್ನು ಮಾಡುವ ಮೂಲಕ ಜಾಗೃತಗೊಳಿಸುತ್ತಾ ಆಶೀರ್ವದಿಸುತ್ತಿದ್ದಾರೆ. ಅವರ ಜನ್ಮ ದಿನವನ್ನು ನಮ್ಮ ಫೌಂಡೇಶನ್ ವತಿಯಿಂದ ಹಲವಾರು ಕಾರ್ಯಕ್ರಮಗಳನ್ನು ಪ್ರತಿ



ವರ್ಷವೂ ಹಮ್ಮಿಕೊಳ್ಳುತ್ತೇವೆ. ಗುರುಗಳು ನಮ್ಮ ಸಿಂಧನೂರಿನ ಕರುಣೆಯ ಕಾರುಣ್ಯಾಶ್ರಮಕ್ಕೆ ನಿರಂತರ ಶುಭಾಶಿರ್ವಾದ ಮೂಲಕ ಸೇವೆಗೆ ಸ್ಪೂರ್ತಿ ನೀಡಿದ್ದಾರೆ.

ಅನಾಥರಿಗೆ ಸಹಾಯ ಸಹಕಾರ ಮಾಡುವ ಸಂಕಲ್ಪದ ಆಶೀರ್ವಾದವೇ ನಮ್ಮ ಸೇವೆಗೆ ಶ್ರೀರಕ್ಷೆ ಅವರ ಸುಂದರ ಸಮಾಜದ ಕನಸಿಗೆ ಇಂತಹ ಕಾರ್ಯಗಳು ನಡೆಯುತ್ತಾ ಇರಬೇಕು ಎನ್ನುವುದು ನಮ್ಮ ಗುರುಗಳ ಆಶಯವಾಗಿದೆ. ಕಾರುಣ್ಯ ಆಶ್ರಮದಲ್ಲಿರುವ ಪ್ರತಿಯೊಬ್ಬ ಹಿರಿಯರು ಮತ್ತು ವಯಸ್ಕರ ಬುದ್ಧಿಮಾಂದ್ಯರು ದೇವರ ಸ್ವರೂಪಿಗಳು ಇಂತಹ ದೇವರ ಸೇವೆ ಮಾಡಲು ನಮಗೆ ಅವಕಾಶ ಸಿಕ್ಕಿರುವುದು ನಮ್ಮ ಜೆ. ಪಿ. ಪಿ.ಯುವ ಫೌಂಡೇಶನ್ ನ ಪುಣ್ಯದ ಕಾರ್ಯವಾಗಿದೆ ಎಂದು ಮಾತನಾಡಿ ಎಲ್ಲಾ ವೃದ್ಧರೂ ಹಾಗೂ ಬುದ್ಧಿಮಾಂದ್ಯ–ರಿಗೆ ಹಣ್ಣು ಹಂಪಲುಗಳನ್ನು ವಿತರಿಸಿದರು.

ಈ ಕಾರ್ಯಕ್ರಮದಲ್ಲಿ ಜೆ. ಪಿ. ಪಿ. ಯುವ ಫೌಂಡೇಶನ್ ನ ಮಹಾವೀರ ಜೈನ್.ಯಶ್ ಸಕಲೇಚಾ.ವಿಶಾಲ್ ಲೋಡಾ. ಯಶ್ ಚಾಜೇಡ್.ಹರ್ಷ ಬೋರಾ.ಸಮ್ಯಕ್ ಜೈನ್.ಇಮಾನಸು ಜೈನ್. ಸಂಜಯ್ ಜೈನ್ ಶೇಟ್ ಬಳಗಾನೂರು. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸಯ್ಯಸ್ವಾಮಿ ಹಿರೇಮಠ. ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ. ಹಾಗೂ ಜೆ. ಪಿ. ಪಿ. ಯುವ ಫೌಂಡೇಶನ್ ನ ಸರ್ವ ಸದಸ್ಯರು ಉಪಸ್ಥಿತರಿದ್ದರು.

# ಹಾಲುಮತ ಪೂಜಾರಿಗಳು ತರಬೇತಿಯಲ್ಲಿ ಬಾಗವಹಿಸಿ–ಶಿವಣ್ಣ ವಕೀಲ್



ನೈಜ್ಯ ದೆಸೆ ನ್ಯೂಸ್

ಕವಿತಾಳ: 'ಇದೇ ತಿಂಗಳು ದಿನಾಂಕ 12.13.14 ರಂದು ನಡೆಯುವ ರಾಜಕೀಯೇತರ ಹಾಲುಮತ ಪೂಜಾರಿಗಳಿಗೆ ಸಂಸ್ಕೃತ ಪಠಣ ಧರ್ಮ ಜಾಗೃತಿ, ಪೂಜಾ ವಿಧಾನ ಹಾಲುಮತ ಸಂಸ್ಕೃತ ಹಾಗೂ ಸಾಹಿತ್ಯ ಸಮ್ಮೇಳನ ಮೂರು ದಿನಗಳ ಕಾರ್ಯಕ್ರಮವಿ ಕನಕಗುರು ಪೀಠ ತಿಂಥಣಿ ಬ್ರಿಜ್‌ನಲ್ಲಿ ಸಿದ್ದರಾಮಾನಂದಪುರಿ ಮಹಾಸ್ವಾಮಿಗಳ ನೇತೃತ್ವದಲ್ಲಿ ನಡೆಯಲಿದ್ದು ಹಾಲುಮತ ಸಮಾಜದ ಪೂಜಾರಿಗಳು ತರಬೇತಿಯಲ್ಲಿ ಪಾಲ್ಗೊಂಡು ಇದರ ಸಧುಪಯೋಗವನ್ನು ಪಡೆದು ಕೊಳ್ಳಬೇಕು' ಎಂದು ಹಾಲುಮತ ಮಹಾಸಭಾದ ರಾಯಚೂರು ಜಿಲ್ಲಾ ಅಧ್ಯಕ್ಷರಾದ ಶಿವಣ್ಣ ವಕೀಲರು ಹೇಳಿದರು.

ಅವರು ಇಂದು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. 'ಈ ವರ್ಷವೂ ವಿಶೇಷವಾಗಿ ಹಾಲುಮತ ಧರ್ಮದ ಇತಿಹಾಸವು 2500ವರ್ಷಗಳ ಇತಿಹಾಸದ ಹಿನ್ನಲೆಇದ್ದು ಇತರ ಸಮಾಜಗಳು ಕಡಿಮೆ ಅವದಿಯಲ್ಲಿ ಧಾರ್ಮಿಕವಾಗಿ, ರಾಜಕೀಯವಾಗಿ ಎತ್ತರಕ್ಕೆ ಬೆಳೆದಿದ್ದು ಇದರ ದೃಷ್ಠಿಯಿಂದ ನಮ್ಮ ಹಲುಮತ ಸಮಾಜವು ಧಾರ್ಮಿಕವಾಗಿ, ಸಂಸ್ಕೃತಿಕವಾಗಿ ಉನ್ನತಿಗೊಳಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಇರುತ್ತದೆ.

ಮತ್ತು ಇಂದಿನ ಪೂಜಾರಿಗಳು ಆರ್ಥಿಕವಾಗಿ ಮತ್ತು ಸಂಸ್ಕೃತಿಕವಾಗಿ ತೀರ ಹಿಂದುಳಿದಿದ್ದು ಅವರ ಕುಟುಂಬದ ಉನ್ನತಿ ಮತ್ತು ಸಮಾಜದ ಏಳಿಗೆಗಾಗಿಧರ್ಮದ ಜಾಗೃತಿಗಾಗಿ ರಾಜ್ಯದ ವಿವಿಧ ಭಾಗಗಳಿಂದ ಪಂಡಿತರು ವಿವಿಧ ವಿಷಯಗಳಲ್ಲಿ ಪರಿಣಿತಿ ಹೊಂದಿದ ತಜ್ಞರಿಂದಪೂಜಾರಿಗಳಿಗೆ ತರಬೇತಿಯಲ್ಲಿ ಸಾಹಿತ್ಯ, ಸಾಂಕೃತಿಕ ಬೋಧನೆಯನ್ನು ನೀಡಲಾಗುವುದು ಇದರ ಉಪಯೋಗವನ್ನು ಸಮಾಜದ ಪೂಜಾರಿಗಳು ,ವಿದ್ಯಾವಂತ ಮಕ್ಕಳು, ಮುಖಂಡರು ಈ ತರಬೇತಿಯಲ್ಲಿ ಪಾಲ್ಗೊಳ್ಳುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ' ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಮಾಳಪ್ಪ ತೋಳ, ಪಟ್ಟಣ ಪಂಚಾಯತಿ ಮಾಜಿ ಸದಸ್ಯ ಮೌನೇಶ ಹಿರೇಕುರುಬರು. ಮಲ್ಲಯ್ಯ ನಸ್ಲಾಪೂರ ಇದ್ದರು.

# ಎಸ್.ಎಸ್.ವಿದ್ಯಾಸಂಸ್ಥೆ: ಪಾಲಕರ ಸಮಾಲೋಚನಾ ಸಭೆ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದ ಎಸ್.ಎಸ್.ವಿದ್ಯಾಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಶ್ರೀ ಸಂಗಮೇಶ್ವರ ಪ್ರೌಢಶಾಲೆಯಲ್ಲಿ ಶನಿವಾರ ಪಾಲಕರ ಸಮಾಲೋಚನೆ ಸಭೆ ಆಯೋಜಿಸಲಾಯಿತು. ಈ ಸಂದರ್ಭದಲ್ಲಿ ಸಭೆಯ ಅಧ್ಯಕ್ಷತೆ ವಹಿಸಿದ ಸಂಸ್ಥೆಯ ಕಾರ್ಯದರ್ಶಿ ಸಚಿನ.ಎಚ್.ಪಾಟೀಲ ಮಾತನಾಡಿ ವಿದ್ಯಾರ್ಥಿಗಳು ಜೀವನದಲ್ಲಿ ಕಠಿಣ ಪರಿಶ್ರಮ ಪಡುವಂತವರಾಗಬೇಕು.

ಕಠಿಣ ಪರಿಶ್ರಮದಿಂದ ಎಂತಹ ಸಾಧನೆಯಾದರೂ ಮಾಡಬಹುದು. ಅವರು ದೇಶದ ಅಮೂಲ್ಯ ಸಂಪತ್ತಾಗಿದ್ದಾರೆ ಜೀವನದಲ್ಲಿ ಉತ್ತಮ ಸಂಸ್ಕಾರಗಳನ್ನು



ಬೆಳೆಸಿಕೊಂಡು ಸಂಸ್ಥೆ ಹಾಗೂ ಹೆತ್ತವರಿಗೆ ಕೀರ್ತಿ ತರುವ ಕೆಲಸ ಮಾಡಬೇಕು ಎಂದರು. ಶಿಕ್ಷಕ ಎಸ್.ಸಿ.ಗುಡಗುಂಟಿ ಮಾತನಾಡಿ ಮಕ್ಕಳು ಮೊಬೈಲ್ ಗೀಳಿಗೆ ಅತಿಯಾಗಿ ಅಂಟಿಕೊಳ್ಳದಂತೆ ಪಾಲಕರು ನೋಡಿಕೊಳ್ಳಬೇಕು ಅತಿಯಾದ ಮೊಬೈಲ್ ಬಳಕೆ ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದರ ಜೊತೆಗೆ ಇದು ಅವರ ಕಲಿಕೆಗೆ ಹಿನ್ನಡೆ ಉಂಟು ಮಾಡುತ್ತದೆ ಎಂದರು. ಶಿಕ್ಷಕ ಸಂತೋಷ್ ಜಾಮಗೊಂಡಿ ಮಾತನಾಡಿ ಮಕ್ಕಳ ಉಜ್ವಲ ಭವಿಷ್ಯದ ನಿರ್ಮಾಣದಲ್ಲಿ ಶಿಕ್ಷಕರಷ್ಟೇ ಅಲ್ಲ ಪಾಲಕರ ಜವಾಬ್ದಾರಿಯೂ ಕೂಡಾ ಇದೆ ಅವರು ಈ ನಿಟ್ಟಿನಲ್ಲಿ ಶಿಕ್ಷಕರೊಂದಿಗೆ ಸಹಕ–ರಿಸಬೇಕು ಎಂದು ವಿನಂತಿಸಿಕೊಂಡರು.

ಇದೇ ಸಂದರ್ಭದಲ್ಲಿ ಹತ್ತನೇ ತರಗತಿಯ ಫಲಿತಾಂಶ ಸುಧಾರಣೆ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸ್ಟಾರ್ ಆಫ್ ದಿ ಮಂತ್ ಬ್ಯಾಚ್ ಹಾಕಿ ಬಹುಮಾನ ವಿತರಿಸಲಾಯಿತು. ವೇದಿಕೆಯಲ್ಲಿ ಶಿಕ್ಷಕ ಬಿ.ಆಯ್.ಹಿರೇಹೊಳಿ, ಎಚ್.ಬಿ.ಪಾಟೀಲ, ಎಸ್.ಬಿ.ಸಾಸನೂರ, ಪಾಲಕರ ಪ್ರತಿನಿಧಿ ದೇವಪ್ಪ.ತೋಟದ, ಲಕ್ಷ್ಮೀ ಚೌವಾಣ, ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಪಾಲಕರು ಉಪಸ್ಥಿತರಿದ್ದರು. ಶಿಕ್ಷಕ ಭರಮಪ್ಪ ಐ.ಹಿರೇಹೊಳಿ ನಿರೂಪಿಸಿ ವಂದಿಸಿದರು.

# ಸಾವಿತ್ರಿಬಾಯಿ ಬಾಪುಲೆ ಜನ್ಮದಿನಾಚರಣೆ ಹಾಗೂ ಪಾಲಕ ಪೋಷಕರ ಸಭೆ



ನೈಜ್ಯ ದೆಸೆ ನ್ಯೂಸ್

ಮಸ್ಕಿ ಸಮೀಪದ ಹಾಲಾಪೂರ ಸರಕಾರಿ ಪ್ರೌಢ ಶಾಲೆಯಲ್ಲಿ ಭಾರತದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಬಾಪುಲೆ ಜನ್ಮದಿನಾಚರಣೆ ಹಾಗೂ ಪಾಲಕ ಪೋಷಕರ ಸಭೆ ನಡೆಯಿತು. ಸಭೆಯಲ್ಲಿ ಮುಖಂಡರಾದ ಬಿ ಕರಿಯಪ್ಪ ಮಾತನಾಡಿ ಸಾವಿತ್ರಿ ಬಾಪುಲೆ ಅವರು ಹೆಣ್ಣು ಮಕ್ಕಳ ಶಿಕ್ಷಣ–ಕ್ಕಾಗಿ ಅಪಾರ ಕೊಡುಗೆಯನ್ನು ನೀಡಿದ್ದಾರೆ ಶಿಕ್ಷಣ ನಮ್ಮ ಹಕ್ಕು, ಈಗಿನ ವಿದ್ಯಾರ್ಥಿಗಳು ಸರಿಯಾಗಿ ಶಿಕ್ಷಣ ಪಡೆದು ಭವಿಷ್ಯದಲ್ಲಿ ಉನ್ನತ ಸ್ಥಾನ ಪಡೆಯಬೇಕು ಎಂದು ಹೇಳಿದರು.

ನಂತರ ಮಾತನಾಡಿದ ಮುಖ್ಯ ಗುರು ಸುಭಾಸ್ ಸಿಂಗ್ ಭಾರತದ ಮಹಿಳಾ ಶಿಕ್ಷಣ ಪಿತಾಮಹಿ ಸಾವಿತ್ರಿಬಾಯಿ ಬಾಪುಲೆ ಅವರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಿ ಸಮಾಜದ ಅನಿಷ್ಟ ಪದ್ದತಿಗಳಾದ ಬಾಲ್ಯ ವಿವಾಹ, ಸತಿ ಪದ್ಧತಿ, ಅಸ್ಪೃಶ್ಯತೆ, ಜಾತಿ ತಾರತಮ್ಯ ವಿರುದ್ಧ ಹೋರಾಡಿದ ಅಪ್ರತಿಮ ಮಹಿಳೆ ಸಾವಿತ್ರಿಬಾಯಿ ಬಾಪುಲೆ ಆಗಿದ್ದರು ಹಾಗೂ ಪಾಲಕ ಪೋಷಕರು ತಮ್ಮ ಮಕ್ಕಳ ಅಭ್ಯಾಸದ ಕಡೆ ಗಮನ ಹರಿಸಬೇಕು, ಮಕ್ಕಳ ಕಲಿಕೆ ದೃಷ್ಟಿಯಿಂದ ಶಿಕ್ಷಕರ ಜೊತೆ ಸಂಪರ್ಕ ಇಟ್ಟುಕೊಳ್ಳಬೇಕೆಂದು ಹೇಳಿದರು. ಈ ಸಂದರ್ಭದಲ್ಲಿ ಎಸ್ ಡಿ ಎಂ ಸಿ ಉಪಾಧ್ಯಕ್ಷ ಯಂಕಪ್ಪ ಪೂ.ಪಾ, ಹಳದಯ್ಯ ಸ್ವಾಮಿ, ಕರಿಯಪ್ಪ ಎಚ್ ಕೆ, ಸಿದ್ದಾರ್ಥ್ ಪೂ.ಪಾ, ಬಸವರಾಜ್ ವಾರ್ಡನ್, ಚಂದಪ್ಪ, ಮಹಾಂತೇಶ, ಲಾಲಪ್ಪ ಹಾಗೂ ಪಾಲಕ ಪೋಷಕರು, ಶಿಕ್ಷಕ ಶಿಕ್ಷಕಿಯರು ಇದ್ದರು.

# ರಾಷ್ಟ್ರೋತ್ಥಾನ ಪ್ರಶಸ್ತಿಗೆ ಅರವತ್ತರ ಸಂಭ್ರಮ: ಮನಗೂಳಿ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ರಾಷ್ಟ್ರೋತ್ಥಾನ ಪರಿಷತ್ತು ಕಾರ್ಯ ಆರಂಭ ಮಾಡಿ ಅರವತ್ತು ವರ್ಷಗಳಾದವು. ಸ್ವಸ್ಥ – ಸುಸ್ಥಿರ ಸಮಾಜ ನಿರ್ಮಾಣದ ಗುರಿಯಡೆಗಿನ ಪಯಣದಲ್ಲಿ ಇದೊಂದು ಮೈಲುಗಲ್ಲು. ಈ ಸಂದರ್ಭವನ್ನು ಇನ್ನಷ್ಟು ಅರ್ಥಪೂರ್ಣವಾಗಿಸಲು ಪ್ರಮುಖವಾಗಿ ಐದು ವಿಷಯಗಳಲ್ಲಿ ಪ್ರತಿಯೊಬ್ಬರ ಯೋಚನೆ–ಯೋಜನೆಗಳು "ಹೀಗಿದ್ದರೆ ನಮಗೂ ಜಗತ್ತಿಗೂ ಒಳ್ಳೆಯದು" ಎಂಬ ಸಂದೇಶವನ್ನು ಎಲ್ಲರಿಗೂ ತಲುಪಿಸುವ ಹಾಗೂ ಅವುಗಳನ್ನು ಅನುಷ್ಠಾನಕ್ಕೆ ತರಲು ಉತ್ತೇಜಿಸುವ ಪಂಚ ಪರಿವರ್ತನೆ ಎಂಬ ಜನಜಾಗೃತಿ ಕಾರ್ಯಕ್ರಮವನ್ನು ಎಲ್ಲೆಡೆ ನಡೆಸುತ್ತಾ ಬಂದಿದ್ದೇವೆ ಎಂದು ಕಾರ್ಯಕ್ರಮದ ಜ್ಯೋತಿ ಪ್ರಜ್ವಲಿಸುತ್ತಾ ನಿಂಗರಾಜ ಮನಗೂಳಿ ಜಿಲ್ಲಾ ಸಂಯೋಜಕರು ವಿಜಯಪುರ ಹೇಳಿದರು.

ತಾಳಿಕೋಟೆಯ ಶ್ರೀ ಖಾಸ್ಗತೇಶ್ವರ




ಶಿಕ್ಷಣ ಮಹಾವಿದ್ಯಾಲಯದಲ್ಲಿ ರಾಷ್ಟ್ರೋತ್ಥಾನ ಪರಿಷತ್ ಪ್ರಶಿಕ್ಷಣ ಭಾರತ (ಶಿಕ್ಷಕರ ಪ್ರಶಿಕ್ಷಣ ಪ್ರಕಲ್ಪ) ವಿಜಯಪುರ ಅಡಿಯಲ್ಲಿ ಒಂದು ದಿನದ ಮಟ್ಟಿಗೆ ಪ್ರಶಿಕ್ಷಣ ಭಾರತ ಕಾರ್ಯಕ್ರಮ ಉದ್ದೇಶಿಸಿ ಮಾತನಾಡುತ್ತಾ ಭಾರತದಲ್ಲಿ ಸಾಮಾಜಿಕ ಮೌಲ್ಯಗಳು ಸಾಂಸ್ಕೃತಿಕ ಪರಂಪರೆಯ ಮುಂದುವ–ರಿಕೆಗೆ ಹಾಗೂ ಭಾವನಾತ್ಮಕ ಸೌಖ್ಯಕ್ಕೆ ಕೌಟುಂಬಿಕ ವ್ಯವಸ್ಥೆ ತಳಹದಿಯಾಗಿದೆ. ಸೃಷ್ಟಿಯ ಪ್ರತಿಯೊಂದು ಅಂಶದಲ್ಲೂ ದೈವತ್ವವಿದೆ ಸಕಲ ಚರಾಚರ ಜಗತ್ತಿನ ಒಳಗೂ ಹೊರಗೂ ಒಂದೇ ದೈವತ್ವದ ವ್ಯಾಪಿಸಿದೆ ಜೀವ ಮತ್ತು ಜಗತ್ತಿನ ನಡುವೆ ಬೇರ್ಪಡಿಸಲಾಗದ ಅಂತರ್ ಸಂಬಂಧವಿದೆ ಎಂದು ಹೇಳಿದರು.

ಉಪನ್ಯಾಸ ಅವಧಿ ಒಂದರ ವಿಷಯ: ಪಂಚಮುಖಿ ಶಿಕ್ಷಣ ಮತ್ತು ಪಂಚ ಪರಿವರ್ತನೆ ಕುರಿತು ಶ್ರೀನಿವಾಸ್ ಪಾಟೀಲ್ ಸಂಪನ್ಮೂಲ ವ್ಯಕ್ತಿಗಳು ಮತ್ತು ವಿಭಾಗ ಸಂಯೋಜ–ಕರು ರಾಷ್ಟ್ರೋತ್ಥಾನ ಪರಿಷತ್ ಬಾಗಲಕೋಟೆ ವಿದ್ಯಾರ್ಥಿಗಳನ್ನು ಕುರಿತು ಉಪನ್ಯಾಸ ನೀಡಿದರು ಉಪನ್ಯಾಸ ಅವಧಿ ಎರಡು ವಿಷಯ ಭಾರತೀಯ ನೈಜ ಇತಿಹಾಸ ಕುರಿತು ಡಾ. ಆನಂದ್ ಕುಲಕರ್ಣಿ ಹಿರಿಯ ಇತಿಹಾಸ ಸಂಶೋಧಕರು ಮತ್ತು ಪ್ರಾಧ್ಯಾಪಕರು ವಿಜಯಪುರ ಉಪನ್ಯಾಸವನ್ನು ನೀಡಿದರು ಕಾರ್ಯಕ್ರಮದ ಅಧ್ಯಕ್ಷಸ್ಥಾನ ವಹಿಸಿದ ಕಾಲೇಜಿನ ಪ್ರಾಚಾರ್ಯರಾದ ಡಾ. ಆರ. ಎಂ. ಬಂಟನೂರ ಮಾತನಾಡುತ್ತಾ ಪಂಚಮುಖಿ ಶಿಕ್ಷಣವು ವ್ಯಕ್ತಿಗಳನ್ನು ರೂಪಿಸಿ, ಪಂಚ ಪರಿವರ್ತನೆಯ ಮೂಲಕ ರಾಷ್ಟ್ರ ಮತ್ತು ಸಮಾಜದ ಸುಸ್ಥಿರ, ಸ್ವಾವಲಂಬಿ ಭವಿಷ್ಯವನ್ನು ರೂಪಿಸುವ ಒಂದು 'ವ್ಯವಸ್ಥಿತ ಕಾರ್ಯಕ್ರಮ'ವಾಗಿದೆ ಎಂದು ಹೇಳಿದರು ಕಾರ್ಯಕ್ರಮದ ವೇದಿಕೆ ಮೇಲೆ ಐ.ಕ್ಯೂ.ಎ.ಸಿ ಸಂಯೋಜ–ಕರು ಉಮೇಶ ಮಂಗೋಡ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗ. ಒಂದು ಮತ್ತು ಮೂರನೇ ಸೆಮಿಸ್ಟರನ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಪಾರ್ವತಿ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಐಶ್ವರ್ಯ ದೊಡ್ಡಮನಿ ಸ್ವಾಗತಿಸಿ ಪರಿಚಯಿಸಿದರು. ಮಲ್ಲಿಕಾರ್ಜುನ ವಂದಿಸಿದರು. ರೂಪಾ ಕಾಖಂಡಕಿ ನಿರೂಪಿಸಿದರು.

## ನೇಮಕಾತಿ ಪ್ರಕಟಣೆ

NSIL ನೇಮಕಾತಿ 2026 11 ಕನ್ಸಲ್ಟೆಂಟ್ ಹುದ್ದೆಗಳಿಗೆ ಆನ್‌ಲೈನ್/ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಓಖಖಐ ನೇಮಕಾತಿ 2026: 11 ಕನ್ಸಲ್ಟೆಂಟ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ನ್ಯೂ ಸ್ಪೇಸ್ ಇಂಡಿಯಾ ಲಿಮಿಟೆಡ್ ಜನವರಿ 2026 ರ ಓಖಖಐ ಅಧಿಕೃತ ಅಧಿಸೂಚನೆಯ ಮೂಲಕ ಕನ್ಸಲ್ಟೆಂಟ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರು ಕರ್ನಾಟಕ, ಅಹಮದಾಬಾದ್ ಗುಜರಾತ್ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ಜನವರಿ 31, 2026 ರಂದು ಅಥವಾ ಮೊದಲು ಆನ್‌ಲೈನ್/ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31–ಜನವರಿ–2026 ಹಾರ್ಡ್ ಕಾಪಿ ಸಲ್ಲಿಸಲು ಕೊನೆಯ ದಿನಾಂಕ: 10 ಫೆಬ್ರವರಿ 2026 ಅಧಿಕೃತ ವೆಬ್‌ಸೈಟ್: nsilindia.co.in ಕೊನೆಯ ದಿನಾಂಕ: 10 ಫೆಬ್ರವರಿ 2026

1ನೇ ಪುಟದಿಂದ....

ಸಮಾಜದ ಪ್ರತಿಯೊಬ್ಬರು ಮೈಗೂಡಿಸಿಕೊಳ್ಳಬೇಕು. ಇಂದಿನ ಮಕ್ಕಳಿಗೆ ಅವರ ಆಚಾರ, ವಿಚಾರಗಳ ಮಾಹಿತಿಯನ್ನು ಒದಗಿಸುವ ಕೆಲಸವನ್ನು ಪೋಷಕರು ಮಾಡಬೇಕೆಂದರು. ಈ ವೇಳೆ ಉಪನ್ಯಾಸಕರಾಗಿ ಎಸ್.ಆರ್.ಕೆ. ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಪಕರಾದ ಡಾ.ಸವಿತಾ ಪಂಪಾಪತಿ ಬಡಿಗೇರ್ ಅವರು ಮಾತನಾಡಿ, ಶಿಲ್ಪಕಲೆಗೆ ಅಮರಶಿಲ್ಪಿ ಜಕಣಾಚಾರಿ ಅವರ ಕೊಡುಗೆ ಅಪಾರ.

ಆ ನಿಟ್ಟಿನಲ್ಲಿ ಸಮಾಜಕ್ಕೆ ಒಳ್ಳೆಯ ಶಿಲ್ಪಕಲೆಗಳನ್ನು ನೀಡಿದ್ದು, ಇವರ ಏಕಾಗ್ರತೆ, ಸಾಧನೆ ಸದಾ ಸ್ಮರಣೀಯ ಎಂದರು. ಇಂದು ವಿಶ್ವವಿಖ್ಯಾತ ಶಿಲ್ಪಿಯ ಸಂಸ್ಮರಣೆ ಎಲ್ಲೆಡೆ ನಡೆಯುತ್ತಿದೆ. ಸೃಷ್ಟಿಯ ಮೂಲಕರ್ತೃವಾಗಿರುವ ಜಕಣಾಚಾರಿಯವರ ಶಿಲ್ಪಕಲಾ ಕುಶಲತೆ ಇಂದು ಜಗತ್ತಿನ ಎಲ್ಲೆಡೆ ಪಸರಿಸಿದೆ. ಪ್ರಪಂಚದ ಎಲ್ಲ ವಿದ್ಯೆಗಳ ಮೂಲವಾಗಿರುವ ಜಕಣಾಚಾರಿ ಅವರನ್ನು ಜಗತ್ತಿನ ಮೊದಲ ಮುಖ್ಯ ಎಂಜಿನಿಯರ್ ಎನ್ನಬಹುದು. ಜಕಣಾಚಾರಿಯವರು ಸಾಮಾನ್ಯ ಜನ–ರಿಗೆ ದೇವರ ಪರಿಕಲ್ಪನೆ ನೀಡುವ ಮಧ್ಯಸ್ಥಿಕೆದಾರರಾಗಿದ್ದರು. ವಿಶ್ವಕರ್ಮರ ಶಿಲ್ಪಕಲೆ ಅಮರವಾಗಿದೆ ಎಂದರು. ಶಿಲ್ಪಕಲೆಯಲ್ಲಿ ಶ್ರೀಮಂತ ಪರಂಪರೆ ಹೊಂದಿರುವ ವಿಶ್ವಕರ್ಮ ಸಮುದಾಯ ತಮ್ಮ ಕುಲಕಸುಬುಗಳ ಜೊತೆಗೆ ಶಿಕ್ಷಣ ಪಡೆದು ಸಂಘಟಿತರಾಗಬೇಕು.

ಶೈಕ್ಷಣಿಕವಾಗಿ ಮುಖ್ಯವಾಹಿನಿಗೆ ಬರಬೇಕು. ಸಮುದಾಯದ ಇತರರಲ್ಲೂ ಜಾಗೃತಿ ಮೂಡಿಸಬೇಕು. ಜೀವನ ಸಾರ್ಥಕ ಪಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸಮುದಾಯ ಎಚ್ಚೆತ್ತುಕೊಳ್ಳಬೇಕಾಗಿದೆ ಎಂದರು. ಶಾಸಕರಿಂದ ಮಾಲಾರ್ಪಣೆ: ಇದಕ್ಕೂ ಮುಂಚೆ ನಗರದ ಕಾಳಿದೇವಿ ಆವರಣದಲ್ಲಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಅವರ ಅದ್ದೂರಿ ಭಾವಚಿತ್ರ ಮೆರವಣಿಗೆಗೆ ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಹಾಗೂ ವಿಧಾನ ಪರಿಷತ್ ಸದಸ್ಯರಾದ ಎ.ವಸಂತ ಕುಮಾರ್ ಅವರು ಚಾಲನೆ ನೀಡಿ, ಮಾಲಾರ್ಪಣೆ ಸಲ್ಲಿಸಿ ಗೌರವ ಅರ್ಪಿಸಿದರು. ಈ ವೇಳೆ ವಿವಿಧ ಗಣ್ಯರು ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರಿಗೆ ಸಾಥ್ ನೀಡಿದರು. ಇದೇ ಸಂದರ್ಭದಲ್ಲಿ ದೇವದುರ್ಗದ ಮೂಲ ಪೀಠದ ವಿಶ್ವಕರ್ಮ ಶ್ರೀಮದ್ ಮದಾನೆಗುಂದಿ ಸರಸ್ವತಿ ಸಂಸ್ಥಾನದ ಶ್ರೀಶ್ರೀ ಮೌನೇಶ್ವರ ಮಹಾಸ್ವಾಮಿಗಳು, ಸೂರ್ಯ ನಾರಾಯಣ ಸ್ವಾಮಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ, ಸಮಾಜದ ಮುಖಂಡರಾದ ಎ. ಈರಣ್ಣ ಬಡಿಗೇರ, ವಕೀಲರಾದ ಬ್ರಹ್ಮ ಗಣೇಶ್, ಕೆ.ರಾಮು ಗಾಣಧಾಳ, ಹಿರಿಯ ಪತ್ರಕರ್ತರಾದ ಮಾರುತಿ ಬಡಿಗೇರ, ನಾಗರಾಜ ಪತ್ತಾರ್, ಡಾ.ವೆಂಕಟೇಶ ಅನ್ವರಿ, ಗಿರೀಶ್ ಆಚಾರಿ, ಜಯಂತ್ ಆಚಾರಿ, ಕೆ.ನರಸಪ್ಪ, ಮಲೇಶ, ಪ್ರಕಾಶ್ ಗುಂಜಹಳ್ಳಿ, ಸುರೇಶ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳು ಇದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಮಕ್ಕಳ ಬಾಯಿಯ ಆರೋಗ್ಯಕ್ಕೆ ಮಕ್ಕಳ ದಂತ ತಪಾಸಣೆ ಅಗತ್ಯವಿದೆ :ಡಾಕ್ಟರ ಅಪ್ರೋಜ್ ಭಾನು ದಂತ ವೈದ್ಯಾಧಿಕಾರಿಗಳು



❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜನವರಿ 03: ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸರ್ಕಾರಿ ಉನ್ನತೀಕರಿಸದ ಪಬ್ಲಿಕ್ ಶಾಲೆ ಜವಳಗೇರಾ ಇವರ ಸಂಯುಕ್ತ ಆಶ್ರಯದಲ್ಲಿ ಶಾಲಾ ಮಕ್ಕಳಿಗೆ ದಂತ ಆರೋಗ್ಯ ತಪಾಸಣೆ ಕೈಗೊಳ್ಳಲಾಯಿತು.**

ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾದ ದಂತ ವೈದ್ಯರಾದ ಡಾಕ್ಟರ ಅಪ್ರೋಜ್ ಭಾನು ಅವರು ಮಕ್ಕಳ ದಂತ ಆರೋಗ್ಯ ತಪಾಸಣೆ ಕೈಗೊಂಡರು, ಮಕ್ಕಳಿಗೆ ದಂತ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಿ ಮಕ್ಕಳು ಬೆಳಗ್ಗೆ ದಿನಾಲು ಸರಿಯಾದ ವಿಧಾನದಲ್ಲಿ. ಬ್ರೂಷ್ ಮಾಡುವ ಮೂಲಕ ತಮ್ಮ ಬಾಯಿಯ ಆರೋಗ್ಯವನ್ನು ಸರಿಯಾಗಿ ಕಾಪಾಡಿಕೊಳ್ಳಬೇಕು ಮಕ್ಕಳಿಗೆ. ಸ್ವಲ್ಪ ಪ್ರಮಾಣದಲ್ಲಿ ಹಲ್ಲಿನ ತೊಂದರೆ ಇರುವಂತ ಮಕ್ಕಳಿಗೆ ಸ್ಥಳದಲ್ಲಿಯೇ ಚಿಕಿತ್ಸೆ ನೀಡಿದರು. ಹೆಚ್ಚಿನ ಪ್ರಮಾಣದಲ್ಲಿ ತೊಂದರೆ ಇರುವ ಮಕ್ಕಳನ್ನು ಸರಕಾರಿ ಸಾರ್ವಜನಿಕ ಆಸ್ಪತ್ರೆ ಸಿಂಧನೂರಿಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಳ್ಳಲು ಸಲಹೆ ನೀಡಿದರು.

ನಂತರ ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು ಮಕ್ಕಳು ತಮ್ಮ ದಂತದ ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳಬೇಕು ತಂಬಾಕು ಮತ್ತು ಇನ್ನಿತರ ದುಶ್ಚಟಗಳಿಂದ ದೂರವಿರಬೇಕು ದಿನನಿತ್ಯ ಬಾಯಿಯನ್ನು ಸರಿಯಾದ ವಿಧಾನದಲ್ಲಿ ಬ್ರೂಷ್ ಮಾಡುವ ಮೂಲಕ ಸ್ವಚ್ಛಗೊಳಿಸಬೇಕು ಹಾಗೂ ಬಾಯಿಯಲ್ಲಿ ಯಾವದ ರೀತಿಯ ಹಾಗೂ ಹಲ್ಲಿನ ನೋವು ಕಂಡು ಬಂದರೆ ಕೂಡಲೇ ದಂತ ವೈದ್ಯರಲ್ಲಿ ತಪಾಸಣೆ ಮಾಡಿಸಿಕೊಳ್ಳುವುದು ಅಗತ್ಯವಾಗಿದೆ, ಬಾಯಿಯಲ್ಲಿ ಹಲ್ಲು ಹುಳುಕು ತಿಂದಿರುವುದು ಕೀವು ಸೋರುವುದು ಮತ್ತು ತೀವ್ರವಾದ ಹಲ್ಲಿನ ನೋವು ಬಾಯಿಯ ವಾಸನೆ ಬರುವುದು ಕಂಡು ಬಂದರೆ ಕೂಡಲೇ ದಂತ ವೈದ್ಯರನ್ನು ಭೇಟಿ ಚಿಕಿತ್ಸೆಯನ್ನು ಪಡೆದುಕೊಳ್ಳುವುದು ಅಗತ್ಯವಾಗಿದೆ ಎಂದು ಸರಕಾರಿ ಪಬ್ಲಿಕ್ ಶಾಲೆಯ ಮಕ್ಕಳಿಗೆ ದಂತ ಆರೋಗ್ಯ ಕುರಿತು ಆರೋಗ್ಯ ಶಿಕ್ಷಣ ಮತ್ತು ಸಂವಹನ ನೀಡಲಾಯಿತು. ಈ ಸಂದರ್ಭದಲ್ಲಿ ಸರಕಾರಿ ಪಬ್ಲಿಕ್ ಶಾಲೆಯ ಮುಖ್ಯೋಪಾಧ್ಯಾಯರು ಹನುಮಂತಪ್ಪ ನಾಯಕ ಹಾಗೂ ಆರೋಗ್ಯ ನಿರೀಕ್ಷಣಾಧಿಕಾರಿ ಅಂಬಮ್ಮ ಹಾಗೂ ಶಾಲೆಯ ಶಿಕ್ಷಕ ಶಿಕ್ಷಕಿಯರು ವಿದ್ಯಾರ್ಥಿ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

# ಶ್ರೀ ಘನಮಠೇಶ್ವರ ಶಿಕ್ಷಣ ಮಹಾವಿದ್ಯಾಲಯ (ಬಿ.ಇಡಿ): ಸರಳ ಬದುಕಿನ ಸೂತ್ರ ತಿಳಿಸಿದ ಶ್ರೀ ಸಿದ್ದೇಶ್ವರ ಸ್ವಾಮಿಗಳು



❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಭಾರತದ ಪರಂಪರೆಯನ್ನು ಸ್ವಾಮಿ ವಿವೇಕಾನಂದರಂತೆ ಶ್ರೀ ಸಿದ್ದೇಶ್ವರ ಸ್ವಾಮಿಗಳು ಜಗತ್ತಿನ ಹಲವು ದೇಶಗಳಲ್ಲಿ ಪ್ರವಚನದ ಮೂಲಕ ಜ್ಞಾನ ದೀವಿಗೆ ಬೆಳಗಿಸಿ ವಿಜಯಪುರದ ಹೆಸರನ್ನು ಜಾಗತಿಕ ಮಟ್ಟದಲ್ಲಿ ಪರಿಚಯಿಸಿದ ಕೀರ್ತಿ ಪಡೆದಿದ್ದು ಸ್ವತಃ ಸರಳ ಜೀವನವನ್ನು ಅಳವಡಿಸಿಕೊಂಡು ಮನುಕುಲಕ್ಕೆ ಸರಳ ಬದುಕಿನ ಸೂತ್ರವನ್ನು ತಿಳಿಸಿದ್ದಾರೆ ಎಂದು ಶ್ರೀ ಘನಮಠೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಶ್ರೀ ಎಸ್ ಎಮ್ ಸಜ್ಜನ ಹೇಳಿದರು.**

ದಿನಾಂಕ 02–01–2026 ರಂದು ಪಟ್ಟಣದ ಮಿಣಜಗಿ ಕ್ರಾಸ್ ನಲ್ಲಿರುವ ಶ್ರೀ ಘನಮಠೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಜ್ಞಾನ ಯೋಗಿ ಶ್ರೀ ಸಿದ್ದೇಶ್ವರ ಸ್ವಾಮಿಗಳ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಾ ಸಿದ್ದೇಶ್ವರ ಸ್ವಾಮಿಗಳ ನಡೆ–ನುಡಿ ಮತ್ತು ಆಚಾರ–ವಿಚಾರಗಳು ಮನುಕುಲಕ್ಕೆ ದಾರಿ ದೀಪವಾಗಿವೆ ಎಂದರು.

ಪ್ರಾಚಾರ್ಯರಾದ ಡಾ. ತಿಮ್ಮಯ್ಯ ಶೆಟ್ಟಿ ಇಲ್ಲೂರು ಮಾತನಾಡಿ ಶ್ರೀ ಸಿದ್ದೇಶ್ವರ ಸ್ವಾಮಿಗಳ ಸರಳತೆ, ಶಿಸ್ತು ಮತ್ತು ಅಪಾರವಾದ ಜ್ಞಾನ ಪ್ರತಿಯೊಬ್ಬರಿಗೂ ಮಾರ್ಗದರ್ಶಿಯಾಗಿದ್ದು ಶಿಕ್ಷಕರಾಗುವ ಪ್ರಶಿಕ್ಷಣಾರ್ಥಿಗಳು ಜೀವನದಲ್ಲಿ ಶಿಸ್ತು, ಸಮಯಪ್ರಜ್ಞೆ ಮತ್ತು ನಿರಂತರ ಅಧ್ಯಯನದಿಂದ ಜೀವನದ ಗುರಿ ಸಾಧಿಸಲು ಇಂತಹ ಪುಣ್ಯಪುರುಷರ ಜೀವನ ಸಂದೇಶವನ್ನು ಅರಿಯಬೇಕು ಎಂದರು. ಉಪನ್ಯಾಸಕರಾದ ಜಿ.ಎನ್.ಪಾಟೀಲ್, ಬಿ.ಡಿ.ಗುಮಶೆಟ್ಟಿ ಮಾತನಾಡಿ ಶ್ರೀ ಸಿದ್ದೇಶ್ವರ ಸ್ವಾಮಿಗಳ ವಿಚಾರಧಾರೆಗಳನ್ನು ಮೆಲುಕು ಹಾಕಿದರು. ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಎಮ್.ಐ.ಬಡಿಗೇರ, ಎನ್.ಎಮ್.ಕೊಣ್ಣೂರು ಮತ್ತು ಪ್ರಶಿಕ್ಷಣಾರ್ಥಿಗಳು ಭಾಗವಹಿಸಿದ್ದರು.

# ಸಾವಿತ್ರಿ ಬಾಯಿ ಪುಲೆ ಯವರ ಜನ್ಮದಿನಾಚರಣೆ



❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಸಾವಿತ್ರಿ ಬಾಯಿ ಪುಲೆ ಯವರ ಜನ್ಮದಿನಾಚರಣೆಯನ್ನು ಆಚರಿಸಲಾಯಿತು.**

ಸಾವಿತ್ರಿ ಬಾಯಿಪುಲೆ ಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಕಾಲೇಜಿನ ಪ್ರಾಚಾರ್ಯರಾದ ಡಾ. ಜೆ. ಎಲ್. ಈರಣ್ಣ ಮಾತನಾಡಿ ಸಾವಿತ್ರಿ ಬಾಯಿಪುಲೆಯವರು 1848ರಲ್ಲಿ ಬಾಲಕಿಯರ ಮೊದಲ ಶಾಲೆಯನ್ನು ಸ್ಥಾಪಿಸಿ ಭಾರತದ ಮೊದಲ ಮಹಿಳಾ ಶಿಕ್ಷಕಿ,ಸಮಾಜ ಸುಧಾರಕಿ, ಕವಯತ್ರಿ, ಶಿಕ್ಷಣ ತಜ್ಞೆಯಾಗಿದ್ದರು. ಹಾಗೂ ಅಂದಿನ ದಿನಗಳಲ್ಲಿ ಮಹಿಳೆಯರಿಗೆ ಶಿಕ್ಷಣ ಪಡೆಯುವ ಅವಕಾಶ ಇಲ್ಲದೆ ಇರುವ ಸಮಯದಲ್ಲಿ ಮಹಿಳೆಯರ ಶಿಕ್ಷಣಕ್ಕಾಗಿ ಶ್ರಮಿಸುವ ಮೂಲಕ ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿ ಅಕ್ಷರದ ಅವ್ವ ಎನ್ನಿಸಿಕೊಂಡರು ಜೋತೆಗೆ ಸಾಮಾಜಿಕ ಅನಿಷ್ಟಗಳಾದ ಬಾಲ್ಯ ವಿವಾಹ ,ಜಾತಿ ಪದ್ಧತಿ, ಸತಿ ಪದ್ಧತಿ ,ವಿಧವೆಯರ ಕೇಶ ಮುಂಡನ ಇನ್ನಿತರ ಪದ್ದತಿಗಳ ವಿರುದ್ಧ ಹೋರಾಟ ನಡೆಸಿದರು.

ಅವರ ಆದರ್ಶಮಯ ಜೀವನ ನಮ್ಮೆಲ್ಲರಿಗೂ ಮಾದ–ರಿಯಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಕಚೇರಿ ಅಧಿಕ್ಷಕರಾದ ರಂಗನಾಥ್ ಅತ್ತನೂರು, ಉಪನ್ಯಾಸಕರಾದ ಡಾ. ಬಸವರಾಜ ಕರಡಿಗುಡ್ಡ , ಭೀಮಸಿಂಗ್, ಸುರೇಶ್ ಹರನಹಳ್ಳಿ, ರಂಗಣ್ಣ, ಮರಿಯಮ್ಮ ಮತ್ತು ರೇಣುಕಾ ಸೇರಿದಂತೆ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಇದ್ದರು.

# ಮೌಲಾನಾ ಅಬ್ದುಲ್ ಕಲಾಂ ಆಜಾದ್ ಬ್ರಿಗೇಡ್ ನೂತನ ಅಧ್ಯಕ್ಷರಾಗಿ ಜಮೀಲ್ ಇಸ್ಮಾಯಿಲ್ ನೇಮಕ



❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಮೌಲಾನಾ ಅಬ್ದುಲ್ ಕಲಾಂ ಆಜಾದ್ ಬ್ರಿಗೇಡ್ ಮಾನವಿ ತಾಲೂಕು ಘಟಕಕ್ಕೆ ನೂತನ ಅಧ್ಯಕ್ಷರಾಗಿ ಜಮೀಲ್ ಇಸ್ಮಾಯಿಲ್ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಅಜ್ಮೀರ್ ಪಾಷಾ ಅವರು ನೇಮಕಗೊಂಡಿದ್ದಾರೆ.**

ಮೌಲಾನಾ ಅಬ್ದುಲ್ ಕಲಾಂ ಆಜಾದ್ ಬ್ರಿಗೆಡ್ ನ ರಾಯಚೂರು ಜಿಲ್ಲಾ ಅಧ್ಯಕ್ಷ ಸೈಯದ್ ಹುಸೇನ್ ಸಾಹೇಬ್ ಅವರ ನೇತೃತ್ವದಲ್ಲಿ ಮಾನ್ವಿಯಲ್ಲಿ ನಡೆದ ತಾಲೂಕ ಘಟಕದ ಪದಾಧಿಕಾರಿಗಳ ಆಯ್ಕೆ ಸಭೆಯಲ್ಲಿ ತಾಲೂಕ ಘಟಕಕ್ಕೆ ನೂತನ ಅಧ್ಯಕ್ಷ ಸೇ–ರಿದಂತೆ ಈ ಕೆಳಗಿನ ವಿವಿಧ ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು. ಮಾನವಿ ತಾಲೂಕಿನ ನೂತನ ಅಧ್ಯಕ್ಷರಾಗಿ ಜಮೀರ್ ಇಸ್ಮಾಯಿಲ್, ಉಪಾಧ್ಯಕ್ಷರಾಗಿ ಸೈಯದ್ ಸಲೀಂ ಪಾಷ, ತಾಲೂಕ ಪ್ರಧಾನ ಕಾರ್ಯದರ್ಶಿ ಅಜ್ಜಿರ ಪಾಷ ಇವರನ್ನು ನೇಮಕಗೊಳಿಸಿ. ತಕ್ಷಣ ಬ್ರಿಗಡ್ನ ತತ್ವ ಸಿದ್ದಾಂತ ಮತ್ತು ಮೌಲಾನ ಅಬುಲ್ ಕಲಾಂ ಆಜಾದ್ ಅವರ ತತ್ವ ಸದ್ಧಾಂತಗಳನ್ನು ಇಂದಿನ ಯುವ ಪೀಳಿಗೆಗೆ ತಿಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುವಂತೆ ಸೂಚಿಸಿ ಆದೇಶ ಪತ್ರಗಳನ್ನು ಜಿಲ್ಲಾ ಅಧ್ಯಕ್ಷ ಸೈಯದ್ ಹುಸೇನ್ ಸಾಹೇಬ್ ಅವರು ವಿತರಿಸಿ ಅಭಿನಂದಿಸಿದರು.

# ಅಧಿಕಾರ ಶಾಶ್ವತ ಅಲ್ಲ ಮಾಡುವ ಸೇವೆ ಶಾಶ್ವತ: ಶಾಸಕ ರಾಜುಗೌಡ



❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟ: ಅಧಿಕಾರ ಯಾವುದೇ ವ್ಯಕ್ತಿಗೆ ಶಾಶ್ವತ ಅಲ್ಲ ಇವತ್ತು ಇರುತ್ತೆ ನಾಳೆ ಹೋಗುತ್ತೆ ಆದರೆ ಜನರ ಆಶೀರ್ವಾದದಿಂದ ಸಿಕ್ಕ ಅಧಿಕಾರದ ಅವಧಿಯಲ್ಲಿ ಜನ ಮೆಚ್ಚುವ ಕೆಲಸ ಮಾಡಿದರೆ ಮಾತ್ರ ಅದು ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುತ್ತದೆ ಅಂತಹ ಕೆಲಸವನ್ನು ಇಲ್ಲಿಯ ಗ್ರಾಪಂ ಸದಸ್ಯರು ಗ್ರಾಮೀಣ ಸಂತೆ ಮಾರುಕಟ್ಟೆ ಹಾಗೂ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸುವುದರ ಮೂಲಕ ಮಾಡಿದ್ದಾರೆ, ಇದು ಇಡೀ ಜಿಲ್ಲೆಗೆ ಮಾದ–ರಿಯಾಗಿದೆ ಎಂದು ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ(ಕು.ಸಾಲವಾಡಗಿ) ಹೇಳಿದರು.**

ತಾಲೂಕಿನ ಕಲ್ಕೇರಿ ಗ್ರಾಮದ ಮುಖ್ಯ ಬಜಾರ್ ನಲ್ಲಿ ಜೀಪಂ ವಿಜಯಪುರ, ತಾಪಂ ತಾಳಿಕೋಟಿ ಹಾಗೂ ಗ್ರಾಪಂ ಕಾರ್ಯಾಲಯ ಕಲಿಕೇರಿ ಇವರ ವತಿಯಿಂದ ಹಮ್ಮಿಕೊಂಡ ಮಹಾತ್ಮ ಗಾಂಧೀಜಿ ಮಾರುಕಟ್ಟೆ ಹಾಗೂ ವಾಣಿಜ್ಯ ಮಳಿಗೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕಲಕೇರಿ ಗ್ರಾಪಂ ಸದಸ್ಯರು ಹಾಗೂ ಅಧಿಕಾರಿಗಳು ಕಡಿಮೆ ಅವಧಿಯಲ್ಲಿ ಈ ಮಳಿಗಿಗಳನ್ನು ನಿರ್ಮಾಣ ಮಾಡಿದ್ದಾರೆ ಆದರೆ ಈ ಜಾಗದಲ್ಲಿ 30 40 ವರ್ಷಗಳಿಂದ ಬಾಡಿಗೆ ಕಟ್ಟಿ ತಮ್ಮ ವ್ಯಾಪಾರವನ್ನು ಮಾಡಿಕೊಂಡಿದ್ದ ವ್ಯಾಪಾರಸ್ಥ–ರಿಗೆ ಮೊದಲ ಆದ್ಯತೆ ನೀಡಿ ಊರಿಗೆ ಅಂಗಡಿ ನೀಡಬೇಕು ಎಂದು ಸೂಚಿಸುತ್ತೇನೆ ಎಂದರು.

ಕಲಕೇರಿ ತಾಲೂಕಿನ ಅತಿ ದೊಡ್ಡ ಗ್ರಾಮವಾಗಿದ್ದು ಇದು ಹೋಬಳಿಯಾಗಲು ಎಲ್ಲಾ ಸೌಲಭ್ಯಗಳನ್ನು ಹೊಂದಿದೆ ಈಗಾಗಲೇ ನಾನು ಕಲಕೇರಿ ಹಾಗೂ ಕೋರವಾರ ಗ್ರಾಮಗಳನ್ನು ಹೋಬಳಿಯನ್ನಾಗಿ ಮಾಡಲು ಸರ್ಕಾರದ ಮೇಲೆ ಒತ್ತಡ ಹಾಕಿದ್ದೇನೆ ನನ್ನ ಅವಧಿಯಲ್ಲಿಯೇ ಈ ಕೆಲಸ ಆಗುವಂತೆ ಆಗಲು ಶಕ್ತಿಮೀರಿ ಪ್ರಯತ್ನಿಸುತ್ತೇನೆ ಎಂದರು. ಸಿಂದಗಿ ಶಾಸಕ ಅಶೋಕ ಮನಗೂಳಿ ಮಾತನಾಡಿ ಅಂಗಡಿಗಳಿಲ್ಲದೆ ಇಲ್ಲಿಯ ವ್ಯಾಪಾರಸ್ಥರಿಗೆ ತುಂಬಾ ತೊಂದರೆಯಾಗಿ–ತ್ತು ಗ್ರಾಪಂ ದವರು 1.13 ಗುಂಟೆ ಜಾಗದಲ್ಲಿ ಸುಸಜ್ಜಿತ ಹಾಗೂ ಸುಂದರವಾದ ಮಾರುಕಟ್ಟೆ ಹಾಗೂ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ ಅದಕ್ಕೆ ಮಹಾತ್ಮ ಗಾಂಧೀಜಿಯವರ ಹೆಸರು ಇಟ್ಟಿರುವುದು ಶ್ಲಾಘನೀಯವಾದ ಕಾರ್ಯವಾಗಿದೆ ಎಂದರು.

ಮುಖಂಡ ಸುರೇಶಧಣಿ ನಾಡಗೌಡ (ಬಿಂಜಲಭಾವಿ), ಪಿಡಿಓ ಬಿ.ಎಂ.ಸಾಗರ, ಗ್ರಾಪಂ ಸದಸ್ಯ ನಬಿಲಾಲ ನಾಯ್ಕೋಡಿ ಸೇರಿದಂತೆ ಇತರರು ಮಾತನಾಡಿದರು. ಕಲ್ಕೇರಿಯ ಪೂಜ್ಯ ಸಿದ್ದರಾಮ ಶಿವಾಚಾರ್ಯರು ಹಾಗೂ ಮೌ.ನಾಸಿರ್ ಉಮರಿ ಸಾನಿಧ್ಯ ವಹಿಸಿದ್ದರು. ಇದೇ ಸಂದರ್ಭದಲ್ಲಿ ಕಲಿಕೇರಿ ಗ್ರಾಪಂ ನ 28 ಸದಸ್ಯರಿಗೆ ಶಾಸಕ ರಾಜುಗೌಡ ಪಾಟೀಲ ಸನ್ಮಾನಿಸಿ ಗೌರವಿಸಿದರು. ಗ್ರಾಪಂ ಅಧ್ಯಕ್ಷ ರಾಜ ಅಹ್ಮದ್ ಸಿರಸಗಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಗ್ರಾಪಂ ಉಪಾಧ್ಯಕ್ಷೆ ವಿಜಯಲಕ್ಷ್ಮಿ ಬೇಡರ್, ಸಂಗನಗೌಡ ಲಿಂಗದಳ್ಳಿ, ರಾಘು ದೊಡ್ಡಮನಿ, ಕನಕರಾಜ ವಡ್ಡರ್, ಪಿಕೆಪಿಎಸ್ ಅಧ್ಯಕ್ಷ ರುದ್ರಪ್ಪ ಗುಮಶೆಟ್ಟಿ, ಲಕ್ಕಪ್ಪ ಬಡಿಗೇರ್, ರುದ್ರಪ್ಪ ಗುಮಶೆಟ್ಟಿ, ದಾವಲಸಾಬ ನಾಯ್ಕೋಡಿ, ರಮೇಶ ಹೊಸಮನಿ, ಕಾಜಾಅಮೀನ್ ವಲ್ಲಿಬಾಯಿ, ದೇವೇಂದ್ರ ಜಂಬಗಿ, ಕಿರಣಕುಮಾರ ದೇಸಾಯಿ, ರಾಮರಾವ್ ದೇಶಮುಖ, ಪ್ರೇಮ ಪವಾರ,ಹಣಮಂತ ವಡ್ಡರ,ಡಾ.ಎಂ.ಎಂ.ಗುಡ್ನಾಳ, ಶರಣಪ್ಪ ಮೋಪಗಾರ ಹಾಗೂ ಗ್ರಾಮಸ್ಥರು ಇದ್ದರು. ಸುಧಾಕರ ಅಡಕಿ ಸ್ವಾಗತಿಸಿದರು. ಶಿವಾನಂದ ಸಜ್ಜನ ನಿರೂಪಿಸಿದರು,ಈ–

## ಶಿಕ್ಷಣ ಮಾರ್ಗದರ್ಶಿ ವಿಶೇಷ

### B.Pharmacy

(B.Pharm) ಎಂಬುದು 4 ವರ್ಷಗಳ ಪದವಿಪೂರ್ವ (Undergraduate) ಕೋರ್ಸ್ ಆಗಿದ್ದು, ಔಷಧ ತಯಾರಿಕೆ, ಉತ್ಪಾದನೆ, ಗುಣಮಟ್ಟ ನಿಯಂತ್ರಣ ಮತ್ತು ಔಷಧ ರಸಾಯನಶಾಸ್ತ್ರದ ವಿಷಯಗಳನ್ನು ಒಳಗೊಂಡಿರುತ್ತದೆ. ಈ ಕೋರ್ಸ್‌ಗೆ ಸಾಮಾನ್ಯವಾಗಿ 10+2 (PUC) ನಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೊತೆಗೆ ಗಣಿತ ಅಥವಾ ಜೀವಶಾಸ್ತ್ರ ವಿಷಯಗಳನ್ನು ಓದಿದ ವಿದ್ಯಾರ್ಥಿಗಳು ಅರ್ಹರಾಗಿರುತ್ತಾರೆ. ಈ 8 ಸೆಮಿಸ್ಟರ್‌ಗಳ ಕೋರ್ಸ್‌ನಲ್ಲಿ Pharmaceutics, Pharmacology, Medicinal Chemistry, Pharmacognosy ಸೇರಿದಂತೆ ಅನೇಕ ವಿಷಯಗಳನ್ನು ಕಲಿಸಲಾಗುತ್ತದೆ. ಕೋರ್ಸ್ ಪೂರ್ಣಗೊಳಿಸಿದ ನಂತರ ಔಷಧೋದ್ಯಮ, ಆಸ್ಪತ್ರೆಗಳು, ಸಂಶೋಧನಾ ಸಂಸ್ಥೆಗಳು ಮುಂತಾದ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳು ಲಭ್ಯ. ಃ.ಕುಚಿಡಿಟ ಕೋರ್ಸ್ ವಿವರಗಳು ಕನ್ನಡದಲ್ಲಿ ಕೋರ್ಸ್ ಅವಧಿ 4 ವರ್ಷಗಳು (8 ಸೆಮಿಸ್ಟರ್‌ಗಳು) ಅರ್ಹತೆ (Eligibility) 10+2 ಅಥವಾ ಕಗಅ ಪಾಸಾಗಿರಬೇಕು ಕೋರ್ಸ್ ಉದ್ದೇಶ ಔಷಧಗಳ ತಯಾರಿಕೆ (Drug Formulation) ಉತ್ಪಾದನೆ ಹಾಗೂ ಗುಣಮಟ್ಟ ನಿಯಂತ್ರಣ (Manufacturing & Quality Control) ಔಷಧ ವಿಶ್ಲೇಷಣೆ ಮತ್ತು ರಸಾಯನಿಕ ರಚನೆಗಳ ಅಧ್ಯಯನ (Analysis & Chemistry) ಪ್ರಮುಖ ವಿಷಯಗಳು (Key Subjects) ಫಾರ್ಮಾಸ್ಯುಟಿಕ್ಸ್ (Pharmaceutics) ಔಷಧಗಳನ್ನು ರೂಪಿಸುವ ಮತ್ತು ತಯಾರಿಸುವ ವಿಧಾನಗಳು ಫಾರ್ಮಕಾಲಜಿ (Pharmacology) ಔಷಧಗಳು ಮಾನವ ದೇಹದ ಮೇಲೆ ಮಾಡುವ ಪರಿಣಾಮಗಳ ಅಧ್ಯಯನ. ಮೆಡಿಸಿನಲ್ ಕೆಮಿಸ್ಟ್ರಿ (Medicinal Chemistry) ಔಷಧಗಳ ರಸಾಯನಿಕ ರಚನೆ ಮತ್ತು ಸಂಶ್ಲೇಷಣೆ. ಫಾರ್ಮಾಸ್ಯುಟಿಕಲ್ ಅನಾಲಿಸಿಸ್ (Pharmaceutical Analysis) ಔಷಧಗಳ ಗುಣಮಟ್ಟ ಪರೀಕ್ಷೆ ಮತ್ತು ವಿಶ್ಲೇಷಣೆ. ಹ್ಯೂಮನ್ ಅನಾಟಮಿ & ಫಿಸಿಯಾಲಜಿ ಮಾನವ ದೇಹದ ಅಂಗರಚನೆ ಮತ್ತು ಶರೀರ ಕಾರ್ಯಗಳ ಅಧ್ಯಯನ.ಮೈಕ್ರೋಬಯಾಲಜಿ (Microbiology) ಸೂಕ್ಷ್ಮ ಜೀವಿಗಳು ಮತ್ತು ಅವುಗಳ ಪ್ರಭಾವ. ಉದ್ಯೋಗಾವಕಾಶಗಳು (Career Opportunities) ಫಾರ್ಮಾಸ್ಯುಟಿಕಲ್ ಇಂಡಸ್ಟ್ರಿ ಹಾಸ್ಪಿಟಲ್ ಫಾರ್ಮಸಿ ಡ್ರಗ್ ಟೆಸ್ಟಿಂಗ್ ಲ್ಯಾಬ್‌ಗಳು ಕ್ಲಿನಿಕಲ್ ರಿಸರ್ಚ್ ಫಾರ್ಮಕೋವಿಜಿಲೆನ್ಸ್

1ನೇ ಪುಟದಿಂದ....

ದೇಶದಲ್ಲೇ ನಂಬರ್ 1 ಸ್ಥಾನದಲ್ಲಿದೆ. ನಾವು ನುಡಿದಂತೆ ನಡೆಯುತ್ತೇವೆ. ಹೇಳಿದಂತೆ ಕೆಲಸ ಮಾಡತ್ತೇವೆ. ರಾಯಚೂರು ಜಿಲ್ಲೆಯಲ್ಲಿ ಕೊನೆಯ ಭಾಗದ ರೈತರಿಗೆ ನೀರು ಕೊಡಲು ನಾವು ಬದ್ಧರಾಗಿದ್ದೇವೆ ಎಂದು ತಿಳಿಸಿದರು. ರಾಜಸ್ಥಾನ ರಾಜ್ಯ ಬಿಟ್ಟರೆ ಕರ್ನಾಟಕ ರಾಜ್ಯವು ಹೆಚ್ಚು ಒಣಭೂಮಿ ಇರುವ ಎರಡನೇ ರಾಜ್ಯವಾಗಿದೆ. ಇದು ನಮ್ಮ ಗಮನಕ್ಕಿದೆ. ಈ ಕಾರಣದಿಂದಾಗಿ ಸಿಂಧನೂರ, ರಾಯಚೂರು ಸೇ–ರಿದಂತೆ ಎಲ್ಲಾ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಒತ್ತು ನೀಡಿ ನೀರಾವರಿ ಪ್ರದೇಶದ ವಿಸ್ತೀರ್ಣಕ್ಕೆ, ಹಸೀರಿಕರಣಕ್ಕೆ ಒತ್ತು ಕೊಡುವ ಉದ್ದೇಶ ಹೊಂದಿದ್ದೇವೆ ಹೊಂದಿದ್ದೇವೆ ಎಂದರು. ಕೃಷ್ಣ ಮೇಲ್ದಂಡೆ ಮೂರನೇ ಹಂತದ ಯೋಜನೆಯ ಅನುಷ್ಠಾನಕ್ಕೆ ಕೇಂದ್ರ ಸರ್ಕಾರವು ಇದುವರೆಗೆ ಗೆಜೆಟ್ ನೊಟಿಪಿಕೇಶನ್ ಮಾಡುತ್ತಿಲ್ಲ. 172 ಟಿಎಂಸಿ ನೀರು ಬಳಸಿಕೊಳ್ಳಲು ಯಾವುದೇ ಅಭ್ಯಂತರ ಇಲ್ಲ ಎಂಬುದಾಗಿ 2013ರಲ್ಲಿಯೇ ನ್ಯಾಯ ನಮ್ಮ ಪರವಾಗಿದೆ ಎಂದು ತಿಳಿಸಿದರು. ಬಾಕಿ ಅನುದಾನ ಬಿಡುಗಡೆ: ಶ್ರೀ ಸೋಮಲಾಪುರದ ಅಂಬಾಮಠದ ದೇವಸ್ಥಾನಕ್ಕೆ ನಿಗದಿಪಡಿಸಿದ 6.30 ಕೋಟಿ ರೂ ಪೈಕಿ ಇದುವರೆಗೆ 2 ಕೋಟಿ ರೂ ವೆಚ್ಚ ಮಾಡಲಾಗಿದೆ. ಬಾಕಿ ಅನುದಾನವನ್ನು ಸಹ ಬಿಡುಗಡೆ ಮಾಡಿ ಅಂಬಾಮಠದ ಸಮಗ್ರ ಅಭಿವೃದ್ಧಿಗೆ ನಾವು ಬದ್ದರಾಗಿದ್ದೇವೆ ಎಂದು ತಿಳಿಸಿದರು. ಮಹಾತ್ಮ ಗಾಂಧೀಜಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸ್ವರೂಪವನ್ನು ಕೇಂದ್ರ ಸರ್ಕಾರವು ಸಂಪೂರ್ಣ ಬದಲಿಸಿ, ಜನ ಸಾಮಾನ್ಯರಿಗೆ ಅನ್ಯಾಯ ಮಾಡುತ್ತಿದೆ ಎಂದು ಮುಖ್ಯಮಂತ್ರಿಗಳು ಅಸಮಧಾನ ವ್ಯಕ್ತಪಡಿಸಿದರು. ಶಾಸಕರಿಗೆ ಅಭಿನಂದನೆ: ಸಿಂಧನೂರು ತಾಲೂಕಿನ ಸಮಸ್ತ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಯೋಚಿಸಿ, ಕೆಕೆಆರ್ ಡಿಬಿಯಿಂದ 14 ಬಸ್ ಗಳ ಸೌಕರ್ಯ ಕಲ್ಪಿಸುವಲ್ಲಿ ಶ್ರಮಿಸಿದ ಸಿಂಧನೂರ ಶಾಸಕರಾದ ಹಂಪನಗೌಡ ಬಾದರ್ಲಿ ಅವರಿಗೆ ವಿದ್ಯಾರ್ಥಿಗಳ ಪರವಾಗಿ ಅಭಿನಂದನೆ ತಿಳಿಸುತ್ತೇನೆ ಎಂದು ಮುಖ್ಯಮಂತ್ರಿಗಳು ಸಂತಷ ವ್ಯಕ್ತಪಡಿಸಿದರು. ಅಂಬಾದೇವಿ ದರ್ಶನದಿಂದ ಸಂತಷ: ಸೋಮಲಾಪುರದ ಸಿದ್ಧಪರ್ವತಕ್ಕೆ ಆಗಮಿಸಿ ಶ್ರೀ ಅಂಬಾದೇವಿ ಮಹೋತ್ಸವ ಮತ್ತು ಜಂಬೂ ಸವಾರಿಗೆ ಸಂತೋಷದಿಂದ ಚಾಲನೆ ನೀಡಿದ್ದೇನೆ. ಶ್ರೀ ಅಂಬಾದೇವಿಯ ದರ್ಶನ ಪಡೆದಿರುವುದು ನನ್ನ ಪುಣ್ಯ ಎಂದೇ ಭಾವಿಸಿದ್ದೇನೆ ಎಂದು ತಿಳಿಸಿದ ಮುಖ್ಯಮಂತ್ರಿಗಳು, ನೆರೆದಿದ್ದ ಎಲ್ಲ ಜನತೆಗೆ ಎಲ್ಲ ಭಕ್ತರಿಗೆ ತಾಯಿ ಅಂಬಾದೇವಿ ಒಳ್ಳೆಯದು ಮಾಡಲಿ ಎಂದು ತಾವು ಪ್ರಾರ್ಥಿಸುವುದಾಗಿ ತಿಳಿಸಿದರು. ಕರ್ನಾಟಕ ರಾಜ್ಯ ಮೂಲಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಶಾಸಕರಾದ ಹಂಪನಗೌಡ ಬಾದರ್ಲಿ ಅವರು ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಸಚಿವರಾದ ಸತೀಶ ಜಾರಕಿಹೊಳಿ, ರಾಮಲಿಂಗಾರೆಡ್ಡಿ, ಡಾ.ಶರಣಪ್ರಕಾಶ ಪಾಟೀಲ, ಶಿವರಾಜ ತಂಗಡಗಿ, ಸಾರಿಗೆ ಸಂಸ್ಥೆಯ ಅಧ್ಯಕ್ಷರಾದ ಅರುಣಕುಮಾರ ಪಾಟೀಲ, ಸಂಸದರಾದ ರಾಜಶೇಖರ ಹಿಟ್ನಾಳ, ಶಾಸಕರಾದ ಬಸನಗೌಡ ತುರವಿಹಾಳ, ಬಸನಗೌಡ ದದ್ದಲ್, ಬಿ.ಎಂ ನಾಗರಾಜ, ವಿಧಾನ ಪರಿಷತ್ ಶಾಸಕರಾದ ಎ ವಸಂತಕುಮಾರ, ಬಸವನಗೌಡ ಬಾದರ್ಲಿ, ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಎಸ್ಪಿ ಅರುಣಾಂಕ್ಷು ಗಿರಿ, ಕಲ್ಯಾಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಬಿ ಸುಶೀಲಾ, ಸಹಾಯಕ ಆಯುಕ್ತರಾದ ಬಸವಣೆಪ್ಪ ಕಲಶೆಟ್ಟಿ, ಸಿಂಧನೂರ ತಹಸೀಲ್ದಾರ ಅರುಣ ದೇಸಾಯಿ, ತಾಲೂಕು ಪಂಚಾಯತ್ ಇಓ ಚಂದ್ರಶೇಖರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ವೆಂಕನಗೌಡ ಬಾದರ್ಲಿ, ಶ್ರೀ ಅಂಬಾದೇವಿ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ರಂಗನಗೌಡ, ಸೋಮಲಾಪುರ ಗ್ರಾಮ ಪಂಚಾಯತಿ ಅಧ್ಯಕ್ಷೆ ರೇಣುಕಮ್ಮ ಹುಸೇನಪ್ಪ ಮನ್ನಾಪುರ, ಪಿಎಲ್ ಡಿ ಬ್ಯಾಂಕ್ ಅಧ್ಯಕ್ಷ ಎಂ ದೊಡ್ಡಬಸವರಾಜ, ಟಿಎಪಿಸಿಎಂಎಸ್ ಅಧ್ಯಕ್ಷ ಶರಣಪ್ಪ ರಡ್ಡೇರ್, ಸಿಂಧನೂರ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಅನಿಲಕುಮಾರ ವೈ ಹಾಗೂ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

# ಬೆಟ್ಟದ ಶ್ರೀಶೈಲ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಮಹಾರಥೋತ್ಸವ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಐತಿಹಾಸಿಕ ಬೆಟ್ಟದ ಶ್ರೀಶೈಲ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ಬನದ ಹುಣ್ಣಿಮೆ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು ಬೆಳಿಗ್ಗೆ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಮೂರ್ತಿಗೆ ರುದ್ರಭಿಷೇಕ,ಬಿಲ್ವರ್ಚಾನೆ, ಮಹಾಮಂಗಳಾರತಿ ನಡೆಯಿತು ಅಕ್ಕಿಯಿಂದ ಮಾಡಿದ ಕೀ–ರಿಟವನ್ನು ಸ್ವಾಮಿಯ ಮೂರ್ತಿಗೆ ಹಾಕಿ ವಿಶೇಷ ಅಲಂಕಾರವನ್ನು ಮಾಡಲಾಯಿತು.**

ದೇವಸ್ಥಾನದ ಆವರಣದಲ್ಲಿನ ಶ್ರೀ ಭ್ರಮರಾಂಭ ದೇವಿ ಮೂರ್ತಿಗೆ ಅಭಿಷೇಕ ಹಾಗೂ ಮಹಾಮಂಗಳಾರತಿ ವಿಶೇಷ ಅಲಂಕಾರ ಮಾಡಲಾಯಿತು. ಸಂಜೆ ಪಲ್ಲಕ್ಕಿಯಲ್ಲಿ ಶ್ರೀಶೈಲ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಉತ್ಸವ ಮೂರ್ತಿಯನ್ನು ಕೂಡಿಸಿ ಮೆರವಣಿಗೆ ನಡೆಸಿ ರಥದಲ್ಲಿ ಕೂಡಿಸಿ ಸಾವಿರಾರು ಭಕ್ತರಿಂದ ರಥೋತ್ಸವ ನಡೆಯಿತು. ಕಲ್ಮಠದ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಚೀಕಲಪರ್ವಿ ಶ್ರೀ ರುದ್ರಮುನೀಶ್ವರ ಮಠದ ಶ್ರೀ



ಸಾದಶಿವ ಮಹಾಸ್ವಾಮಿಗಳು, ಸುವರ್ಣಗೀರಿ ಮಠದ ಶ್ರೀ ಶಂಕರಯ್ಯಸ್ವಾಮಿಗಳು ಸೇ–ರಿದಂತೆ ಮಾನ್ವಿ ಪಟ್ಟಣ ಹಾಗೂ ಸುತ್ತ ಮುತ್ತಲಿನ ಗ್ರಾಮಗಳ ಸಾವಿರಾರು ಭಕ್ತರು ರಥೋತ್ಸವದಲ್ಲಿ ಭಾಗವಹಿಸಿದರು. ಬೆಟ್ಟದ ಶ್ರೀಶೈಲ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಶ್ರೀ



ಭ್ರಮರಾಂಭ ದೇವಿ ದೇವಸ್ಥಾನ ಸಮಿತಿಯಿಂದ ಭಕ್ತರಿಗೆ ಅಗತ್ಯವ್ಯವಸ್ಥೆ ಕಲ್ಪಿಸಲಾಗಿತ್ತು. ಮಾನ್ವಿ: ಪಟ್ಟಣದ ಐತಿಹಾಸಿಕ ಬೆಟ್ಟದ ಶ್ರೀಶೈಲ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ಶ್ರೀಶೈಲ ಶ್ರೀ ಮಲ್ಲಿಕಾರ್ಜುನ ಸ್ವಾಮಿಗೆ ವಿಶೇಷವಾಗಿ ಅಕ್ಕಿ ಕಿರೀಟದ ಅಲಂಕಾರ ಮಾಡಲಾಯಿತು. ಮಾನ್ವಿ: ಪಟ್ಟಣದ ಐತಿಹಾಸಿಕ ಬೆಟ್ಟದ ಶ್ರೀಶೈಲ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಮಹಾರಥೋತ್ಸವ ಸಾವಿರಾರು ಭಕ್ತರಿಂದ ವೈಭವದಿಂದ ನಡೆಯಿತು.

# ಜನವಾದಿ ಮಹಿಳಾ ಸಂಘಟನೆ ವತಿಯಿಂದ ಸಾವಿತ್ರಿಬಾಯಿ ಫುಲೆ ಜನ್ಮದಿನಾಚರಣೆ



❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಜ 4 . ಪಟ್ಟಣದ ಹಟ್ಟಿ ಚಿನ್ನದ ಗಣಿಯ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (AIDWA) ವತಿಯಿಂದ ಸಮಾಜ ಸುಧಾರಕಿ, ಮಹಿಳಾ ಶಿಕ್ಷಣದ ಮುಂಚೂಣಿ ನಾಯಕಿ ಅವರ ಜನ್ಮದಿನವನ್ನು ಹಟ್ಟಿ ಪಟ್ಟಣದ ಪೈ ಭವನದಲ್ಲಿ ಅರ್ಥಪೂರ್ಣವಾಗಿ ಆಚ–ರಿಸಲಾಯಿತು.**

ಭಾರತ ಜನವಾದಿ ಮಹಿಳಾ ಸಂಘಟನೆಯ ತಾಲೂಕು ಉಪಾಧ್ಯಕ್ಷೆ ಶಾಂತಾ ಕೆ ಸಾವಿತ್ರಿಬಾಯಿ ಫುಲೆರವರ ಬಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ನಂತರ ಮಾತನಾಡಿದ ಅವರು ಸಾವಿತ್ರಿಬಾಯಿ ಫುಲೆ ಅವರು ದೇಶದ ಮೊದಲ ಮಹಿಳಾ ಶಿಕ್ಷಕಿಯಾಗಿದ್ದು, ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಹಾಗೂ ಜಾತಿ?ಲಿಂಗ ಆಧಾ–ರಿತ ಅಸಮಾನತೆಯ ವಿರುದ್ಧ ಧೈರ್ಯವಾಗಿ ಹೋರಾಡಿದ ಮಹಾನ್ ಚಿಂತಕಿ. ಅವರ ಆದರ್ಶಗಳು ಇಂದಿನ ಸಮಾಜ–ಕ್ಕೆ ದಿಕ್ಕು ತೋರಿಸುತ್ತವೆ" ಎಂದರು. ನಂತರ ಮಾತನಾಡಿದ ರಜೀಯಾ, ಇಂದಿನ ದಿನಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ, ಅಸಮಾನತೆ ಹಾಗೂ ಅನ್ಯಾಯಗಳ ವಿರುದ್ಧ ಸಂಘಟಿತ ಹೋರಾಟ ನಡೆಸಬೇಕಾದ ಅಗತ್ಯವಿದೆ" ಎಂದು ಹೇಳಿದರು.

ಸಿಪಿಎಂ ತಾಲೂಕು ಕಾರ್ಯದರ್ಶಿ ರಮೇಶ ವೀರಾಪೂರು ಮಾತನಾಡಿ, ಶಿಕ್ಷಣವೇ ಸಾಮಾಜಿಕ ಬದಲಾವಣೆಯ ಪ್ರಮುಖ ಸಾಧನ ಎಂಬುದನ್ನು ಸಾವಿತ್ರಿಬಾಯಿ ಫುಲೆ ಅವರು ತಮ್ಮ ಜೀವನದ ಮೂಲಕ ಸಾಬೀತುಪಡಿಸಿದ್ದಾರೆ. ಮಹಿಳೆಯರ ಹಕ್ಕುಗಳು, ಸಮಾನತೆ ಮತ್ತು ಘನತೆಯ ಬದುಕಿಗಾಗಿ ನಡೆಯುತ್ತಿರುವ ಹೋರಾಟಗಳಿಗೆ ಅವರ ಚಿಂತನೆಗಳು ಸದಾ ಪ್ರೇರಣೆಯಾಗಿವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಾವಿತ್ರಿಬಾಯಿ ಫುಲೆ ಅವರ ಜೀವನ, ಹೋರಾಟ ಹಾಗೂ ಸಾಮಾಜಿ–ಕ ಕೊಡುಗೆಗಳ ಕುರಿತು ಚರ್ಚೆ ನಡೆಯಿತು. ಮಹಿಳಾ ಶಿಕ್ಷಣ, ಸಾಮಾಜಿಕ ನ್ಯಾಯ ಹಾಗೂ ಸಮಾನತೆಯ ಮಹತ್ವವನ್ನು ನೆನಪಿಸಲಾಯಿತು. ಕಾರ್ಯಕ್ರಮಕ್ಕೆ ಸಾಹೀರಾ ಖಾನ್ ವಂದಿಸಿದರು. ಈ ಸಂದರ್ಭಗಳಲ್ಲಿ ಗಾಯತ್ರಿ, ಯಶೋಧ, ದೇವಮ್ಮ, ಅಂಬಮ್ಮ, ಲಕ್ಷ್ಮೀ, ಜಯಮ್ಮ, ವಾಯಿದಾ, ಹುಸೇನಬೀ, ಸಮಂಗಲಾ, ಗಿರಿಜಾ, ಭಾಗ್ಯ, ಬೇಗಂ, ನಿಂಗಪ್ಪ ಸೇರಿದಂತೆ ಸಂಘಟನೆಯ ಕಾರ್ಯಕರ್ತರು ಪಾಲ್ಗೊಂಡಿದ್ದರು.

# ಲೊಯೋಲಾ ಸಾಮಾಜ ಸೇವಾ ಕ್ಲಬ್ ನಿಂದ ತಾಯಿ ಎದೆ ಹಾಲು ಉಣಿಸುವ ಕೊಠಡಿ ಪ್ರಾರಂಭ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಕಲ್ಯಾಣ ರ?ನಾಟಕ ರಸ್ತೆ ಸಾರಿಗೆ ಬಸ್ ನಿಲ್ದಾಣದ ಆವರಣದಲ್ಲಿ ಲೊಯೋಲಾ ಸಾಮಾಜ ಸೇವಾ ಕ್ಲಬ್ ವತಿಯಿಂದ ಅಭಿವೃದ್ದಿ ಪಡಿಸಿದ ತಾಯಿ ಎದೆ ಹಾಲು ಉಣಿಸುವ ಕೊಠಡಿಯನ್ನು ಮಾನ್ವಿ ಸಾರಿಗೆ ಘಟಕದ ವ್ಯವಸ್ಥಾಪಕರಾದ ಎಂ. ನಾಗರಾಜ್ ಉದ್ಘಾಟಿಸಿ ಮಾತನಾಡಿ ಮಾನ್ವಿ ಪಟ್ಟಣದಲ್ಲಿ ನಿತ್ಯ ಸಾವಿರಾರು ಜನ ಮಹಿಳೆಯರು ಪ್ರಾಯಾಣಿಸುತ್ತಾರೆ.**

ಅವರಲ್ಲಿ ಶಿಶುವಿನ ತಾಯಂದಿ–ರಿಗೆ ಬಸ್ ನಿಲ್ದಾಣದ ಆವರಣದಲ್ಲಿ ಶಿಶು ಎದೆ ಹಾಲು ಉಣಿಸಲು ಒಂದು ಕೊಠಡಿಯ ವ್ಯವಸ್ಥೆ ಮಾಡಲಾಗಿತ್ತು ನಂತರದಲ್ಲಿ ಲೊಯೋಲಾ ಸಾಮಾಜ ಸೇವಾ ಕ್ಲಬ್ ಮೂಲಕ ಶಾಲೆಯ ವಿದ್ಯರ?ಥಿಗಳು ದೇಣಿಗೆ ಮೂಲಕ ಸಂಗ್ರಹಿಸಿದ ಹಣದಲ್ಲಿ ಮತ್ತಷ್ಟು ಸೌಲಭ್ಯಗಳನ್ನು ಕಲ್ಪಿಸಿರುವುದರಿಂದ ತಾಯಂದಿರಿಗೆ ತಮ್ಮ ಶಿಶುಗಳಿಗೆ ಹಾಲುಣಿಸುವುದಕ್ಕೆ ತುಂಬ



ಆನುಕೂಲವಾಗಿದೆ ಎಂದು ತಿಳಿಸಿದರು. ಲೊಯೋಲಾ ಶಾಲೆಯ ನರದೇಶಕರಾದ ಫಾ. ಸಿರಿಲ್ ರಾಜ್ ಎಸ್.ಜೆ. ಮಾತನಾಡಿ ಶಾಲೆಯ ಮಕ್ಕಳಲ್ಲಿ ಸಾಮಾಜಿಕ ಜವಾಬ್ದಾ–ರಿಯನ್ನು ಹೆಚ್ಚಿಸುವುದಕ್ಕಾಗಿ ಲೊಯೋಲಾ ಸಾಮಾಜ ಸೇವಾ ಕ್ಲಬ್ ವತಿಯಿಂದ ಶಾಲೆಯ ವಿದ್ಯರ?ಥಿಗಳಿಂದ ಸಂಗ್ರಹಿಸಿದ ದೇಣಿಗೆಯ ಮೂಲಕ ಮಾನ್ವಿ ಬಸ್ ನಿಲ್ದಾಣದಲ್ಲಿ ತಾಯಿ ಎದೆ ಹಾಲು ಉಣಿಸುವ ಕೊಠಡಿಯನ್ನು ಅಭಿವೃದ್ದಿ ಪಡಿಸಲಾಗಿದೆ ಎಂದು ತಿಳಿಸಿದರು.

ಕರ?ಯಕ್ರಮದಲ್ಲಿ ಲೊಯೋಲ ಪಿ.ಯು. ಕಾಲೇಜಿನ ಪ್ರಾಚರ?ಯರಾದ ಫಾ. ಪ್ರವೀಣ್ ಕುಮಾರ್ ಎಸ್.ಜೆ. , ಉಪ ಪ್ರಾಚರ?ಯರಾದ ಶ್ರುತಿ, ಖಾಸಿಂ, ಸಾಮಾಜಿ–ಕ ಸೇವಾ ಕ್ಲಬ್‌ನ ಮುಖ್ಯ ಸಂಚಾಲಕರಾದ ಸುಭಾಷ್ ಸಿಂಗ್, ಡೇವಿಡ್ ಕುಮಾರ್ ಶಾಲೆಯ ಮುಖ್ಯ ಶಿಕ್ಷಕಿ ಸಿಸ್ಟರ್ ಜುಲಿಯೆಟ್,ನರೇಂದ್ರ ಸಿಂಗ್, ಸಾರಿಗೆ ಸಂಸ್ಥೆಯ ಕಿರಿಯ ಸಹಾಯಕ ಬಸಯ್ಯ ಗಡ್ಡಿ,ನಿಯಂತ್ರಕರಾದ ರಾಮಂಜನೇಯ್ಯ, ಸಹಾಯಕರಾದ ಈರಪ್ಪ ಸೇರಿದಂತೆ ಲೊಯೋಲಾ ಶಾಲೆಯ ವಿದ್ಯರ?ಥಿಗಳು ಭಾಗವಹಿಸಿದರು. ಮಾನ್ವಿ: ಪಟ್ಟಣದ ಕಲ್ಯಾಣ ರ?ನಾಟಕ ರಸ್ತೆ ಸಾರಿಗೆ ಬಸ್ ನಿಲ್ದಾಣದ ಆವರಣದಲ್ಲಿ ತಾಯಿ ಎದೆ ಹಾಲು ಉಣಿಸುವ ಕೊಠಡಿಯನ್ನು ಮಾನ್ವಿ ಸಾರಿಗೆ ಘಟಕದ ವ್ಯವಸ್ಥಾಪಕರಾದ ಎಂ. ನಾಗರಾಜ್ ಉದ್ಘಾಟಿಸಿದರು.

# ಅನ್ನ ಅಕ್ಷರ ದಾಸೋಹ ಮಾಡುವುದು ಮಹಾ ಪುಣ್ಯ :ಸಚಿವ ಶರಣಬಸಪ್ಪ ದರ್ಶಾನಾಪೂರು



❑ ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು: ಅನ್ನದಾಸೋಹ, ವಿಧ್ಯಾ ದಾಸೋಹ ಮಾಡುವುದು ಪುಣ್ಯದ ಕಾಯಕ ಎಂದು ಸಣ್ಣ ಕೈಗಾರಿಕಾ ಸಚಿವ ಶರಣಬಸಪ್ಪ ದರ್ಶನಾಪುರು ಅಭಿಪ್ರಾಯಪಟ್ಟರು.**

ಪಟ್ಟಣದ ಬಸವೇಶ್ವರ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಪದವಿ ಪೂರ್ವ ಮಹಾವಿದ್ಯಾಲಯದ ಬೆಳ್ಳಿ ಸಂಭ್ರಮ ಉದ್ಘಾಟಿಸಿ ಹಾಗೂ ಸರ್ದಾರ ವಲ್ಲಭಭಾಯಿ ಪಟೇಲ್ ಬಾಲಕರ ವಸತಿ ನಿಲಯ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೆಳೆಸುವುದು ಸಣ್ಣ ಕೆಲಸವಲ್ಲ. ಮಠಮಾನ್ಯಗಳು ಹಾಗೂ ಸಂಘ ಸಂಸ್ಥೆಗಳಿಂದ ಬಡ ಮಕ್ಕಳು ವಿದ್ಯಾಭ್ಯಾಸ ಮಾಡಲು ಸಾಧ್ಯವಾಗಿದೆ. ಅಲ್ಲದೇ ದಕ್ಷಿಣ ಕರ್ನಾಟಕದ ವಿದ್ಯಾರ್ಥಿಗಳ ಜೊತೆ ಸ್ಪರ್ಧೆ ಮಾಡುವ ಶಕ್ತಿ ಈ ಭಾಗದ ವಿದ್ಯಾರ್ಥಿಗಳಲ್ಲಿದೆ. 3500 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆಂದರೆ ಸಂಸ್ಥೆ ನೀಡುವ ಗುಣಮಟ್ಟದ ಶಿಕ್ಷಣದಿಂದಾಗಿದೆ ಎಂದರು.

ಶಾಸಕ ಮಾನಪ್ಪ ವಜ್ಜಲ್ ಮಾತನಾಡಿ, ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಶ್ರಮಿಸುವ ಕೆಲಸ ನಮ್ಮ ಭಾಗದ ಜನಪ್ರತಿನಿಧಿಗಳು ಶ್ರಮಿಸಬೇಕು. ದೊಡ್ಡ ಕೈಗಾರಿಕೆಗಳನ್ನು ಕಲ್ಯಾಣ ಕರ್ನಾಟಕದಲ್ಲಿ ಸ್ಥಾಪಿಸಿ ಯುವಕರಿಗೆ ಉದ್ಯೋಗ ಕೊಡುವಂತಹ ಕೆಲಸ ಮಾಡಬೇಕೆಂದರು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಅಮರೇಗೌಡ ಪಾಟೀಲ್ ಬಯ್ಯಾಪುರ, ಹಂಪಿ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ.ಡಿ.ವಿ.ಪರಮಶಿವಮೂರ್ತಿ, ವಿಧಾನ ಪರಿಷತ ಸದಸ್ಯರುಗಳಾದ ಶರಣಗೌಡ ಪಾಟೀಲ್ ಬಯ್ಯಾಪುರ, ಶಶಿಲ್ ಜಿ.ನಮೋಶಿ, ಭೂಪನಗೌಡ ಕರಡಕಲ್, ಬಸವಂತರಾಯ ಕುರಿ, ಬಸವರಾಜ ಮೇಟಿ ಸೇರಿ ಗಣ್ಯರು ಶಿಕ್ಷಕರು ವಿಧ್ಯಾರ್ಥಿಗಳು ಸೇರಿ ಇತರರು ಇದ್ದರು.

# ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮ–ಖಾಲಿ ಇರುವ ಶಿಕ್ಷಕರ ಹುದ್ದೆ ಭರ್ತಿಗೆ ಶಶಿಲ್ ನಮೋಶಿ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು: ಶಿಕ್ಷಣ ಕ್ಷೇತ್ರದಲ್ಲಿ ಕಲ್ಯಾಣ ಕರ್ನಾಟಕ ಭಾಗ ಹಿಂದುಳಿಯಲು ಶಿಕ್ಷಕರ ಕೊರತೆ ಕಾರಣವಾಗಿದೆ. ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ವಿಧಾನ ಪರಿಷತ್ ಸದಸ್ಯ ಶಶಿಲ್ ಜಿ.ನಮೋಶಿ ಸರ್ಕಾರಕ್ಕೆ ಒತ್ತಾಯಿಸಿದರು.**

ಪಟ್ಟಣದ ಪದವಿ ಪೂರ್ವ ಪ್ರೌಢ ಶಾಲಾ ವಿಭಾಗದಲ್ಲಿ ತಾಲೂಕು ಆಡಳಿತ ಕ್ಷೇತ್ರಶಿಕ್ಷಣ ಕಾರ್ಯಾಲಯ ಲಿಂಗಸುಗೂರು ಇವರ ಸಂಂ–ಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ



ಅವರು, ಶಿಕ್ಷಣ ಕ್ಷೇತ್ರದಲ್ಲಿ ಕಲ್ಯಾಣ ಕರ್ನಾಟಕ ಮುಂದೆ ಬರಬೇಕಾದರೆ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಬೇಕೆಂದರು. ವಿದ್ಯಾರ್ಥಿಗಳ ಸರ್ವಾಂಗಿಣ ಅಭಿವೃದ್ಧಿಗೆ ವಿವಿಧ ಕೌಶಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಶಾಸಕ ಮಾನಪ್ಪ ವಜ್ಜಲ್ ಮಾತನಾಡಿ ಪಠ್ಯದ ಜೊತೆ ಪಠೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದು ಅಷ್ಟೆ ಮುಖ್ಯ ಅಂದಾಗ ಸಾಧನೆ ಮಾಡಲು ಸಾಧ್ಯ.ನಮ್ಮ ಭಾಗದಲ್ಲಿ 19 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಅತಿಥಿ ಶಿಕ್ಷಕರಿಂದ ಶಾಲೆಗಳನ್ನು ನಡೆಸಲಾಗುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ನಮ್ಮ ಭಾಗದ ವಿದ್ಯಾರ್ಥಿಗಳು ಹೇಗೆ ಮುಂದೆ ಬರಲು ಸಾಧ್ಯ. ಕೂಡಲೇ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಬೇಕೆಂದರು. ವಿದ್ಯಾರ್ಥಿಗಳಲ್ಲಿರುವ ಸೃಜನಶೀಲತೆ, ಕಲಾ ಪ್ರತಿಭೆ ಮತ್ತು ಸಾಂಸ್ಕೃತಿಕ ಅರಿವು ಸಮಾಜದ ಭವಿಷ್ಯವನ್ನು ರೂಪಿಸುವ ಶಕ್ತಿಯಾಗಿದೆ. ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವದಂತಹ ವೇದಿಕೆಗಳು ಮಕ್ಕಳ ಆತ್ಮವಿಶ್ವಾಸವನ್ನು ಹೆಚ್ಚಿಸಿ, ಅವರ ಅಡಗಿರುವ ಪ್ರತಿಭೆಯನ್ನು ಹೊರತರುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದರು.

ಈ ಸಂದರ್ಭದಲ್ಲಿ ಕು.ಸತ್ಯಮ್ಮ ತಹಶೀಲ್ದಾರ, ಸುಜಾತ ಹೂನೂರು ಕ್ಷೇತ್ರ ಶಿಕ್ಷಣಾಧಿಕಾರಿಗಳು, ನೌಕರಕ ಸಂಘದ ಜಿಲ್ಲಾಧ್ಯಕ್ಷ ಕೃಷ್ಣಾಪ್ಪ, ಬಸವರಾಜ ಕರಡಿ, ಬಸವರಾಜ ಹಂದ್ರಾಳ, ಶರಣಗೌಡ ಅಗಸಿ ಮುಂದಿನ, ಸಂಗಯ್ಯ ಗಣಾಚಾರಿ, ಜಮದಗ್ನಿ ಸೇರಿ ತಾಲೂಕಿನ ವಿವಿಧ ಶಾಲಾ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.